ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಮೌಲ್ಯಗಳ ವಿವೇಚನೆ

(೧೯೯೦ ರಿಂದ ಈಚೆಗಿನ ಸಾಹಿತ್ಯವನ್ನು ಅನುಲಕ್ಷಿಸಿ)

ಪಿಎಚ್.ಡಿ ಪದವಿಗಾಗಿ

ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ

ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕ

ಪ್ರವೀಣ ಪಿ.

ಮಾರ್ಗದರ್ಶಕರು

ಡಾ. ಮಾಧವ

ಸಹಾಯಕ ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – ೫೭೪ ೧೯೯

೨೦೨೧

ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಮೌಲ್ಯಗಳ ವಿವೇಚನೆ.

ಪ್ರಸ್ತಾವನೆ

- ಅಧ್ಯಯನದ ಉದ್ದೇಶಗಳು
- ಅಧ್ಯಯನದ ವ್ಯಾಪ್ತಿ
- ಅಧ್ಯಯನದ ಮಹತ್ವ
- ಅಧ್ಯಯನದ ವಿಧಾನ
- ವಿಷಯಾಧಾರಿತ ಸಾಹಿತ್ಯ ಸಮೀಕ್ಷೆ

ಅಧ್ಯಾಯ ೧: ಮಕ್ಕಳ ಸಾಹಿತ್ಯದ ಚಾರಿತ್ರಿಕ ಹಿನ್ನೆಲೆ.

೧.೧ ಶಿಶು ಸಾಹಿತ್ಯ– ಮಕ್ಕಳ ಸಾಹಿತ್ಯ ವಿವೇಚನೆ

೧.೨ ಮಕ್ಕಳ ಸಾಹಿತ್ಯದ ಲಕ್ಷಣಗಳು

೧.೩ ಮಕ್ಕಳ ಸಾಹಿತ್ಯ: ಮೌಲ್ಯಗಳ ಪರಿಕಲ್ಪನೆ

೧.೪ ಮಕ್ಕಳ ಸಾಹಿತ್ಯದ ಘಟ್ಟಗಳು

೧.೫ ೧೯೮೦ ರ ಪೂರ್ವದ ಮಕ್ಕಳ ಸಾಹಿತ್ಯ ಪತ್ರಿಕೆಗಳು

ಅಧ್ಯಾಯ ೨: ಮಕ್ಕಳ ಸಾಹಿತ್ಯ: ಜಾಗತೀಕರಣ ಮತ್ತು ನವಚಾರಿತ್ರಿಕತೆ

೨.೧ ಜಾಗತೀಕರಣ: ಹಿನ್ನೆಲೆ, ಸ್ವರೂಪ, ಪರಿಣಾಮ

೨.೨ ಜಾಗತೀಕರಣ: ಮೌಲ್ಯ ವ್ಯವಸ್ಥೆಯ ಪಲ್ಲಟ

೨.೩ ಮಕ್ಕಳ ಸಾಹಿತ್ಯದಲ್ಲಿ ನವಚಾರಿತ್ರಿಕತೆ

ಅಧ್ಯಾಯ ೩: ಮಕ್ಕಳ ಕಥಾ ಸಾಹಿತ್ಯ: ಮೌಲ್ಯಗಳ ವಿವೇಚನೆ

೩.೧ ಪ್ರಮುಖ ಕಥೆಗಾರರು ಮತ್ತು ಕಥಾ ಸಂಕಲನಗಳು

೩.೨ ಮಕ್ಕಳ ಕಥೆಗಳಲ್ಲಿ ಮೌಲ್ಯಗಳ ಪ್ರತಿಪಾದನೆ

೩.೨.೧ ಮಕ್ಕಳ ಕಥೆಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳು

೩.೨.೨ ಮಕ್ಕಳ ಕಥೆಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳು

೩.೨. ೩ ಮಕ್ಕಳ ಕಥೆಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳು

೩.೨.೪ ಮಕ್ಕಳ ಕಥೆಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳು

೩.೨.೫ ಮಕ್ಕಳ ಕಥೆಗಳಲ್ಲಿ ನೈತಿಕ ಮೌಲ್ಯಗಳು

ಅಧ್ಯಾಯ ೪: ಮಕ್ಕಳ ಕಾವ್ಯ: ಮೌಲ್ಯಗಳ ವಿವೇಚನೆ

೪.೧ ಪ್ರಮುಖ ಕವಿಗಳು ಮತ್ತು ಕವಿತೆಗಳು

೪.೨ ಮಕ್ಕಳ ಕವಿತೆಗಳಲ್ಲಿ ಮೌಲ್ಯಗಳ ಪ್ರತಿಪಾದನೆ

೪.೨.೧ ಮಕ್ಕಳ ಕವಿತೆಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳು

೪.೨.೨ ಮಕ್ಕಳ ಕವಿತೆಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳು

೪.೨.೩ ಮಕ್ಕಳ ಕವಿತೆಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳು

೪.೨.೪ ಮಕ್ಕಳ ಕವಿತೆಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳು

೪.೨.೫ ಮಕ್ಕಳ ಕವಿತೆಗಳಲ್ಲಿ ನೈತಿಕ ಮೌಲ್ಯಗಳು

ಅಧ್ಯಾಯ ೫: ಮಕ್ಕಳ ನಾಟಕ ಸಾಹಿತ್ಯ: ಮೌಲ್ಯಗಳ ವಿವೇಚನೆ

೫.೧ ಪ್ರಮುಖ ನಾಟಕಗಾರರು ಮತ್ತು ನಾಟಕಗಳು

೫.೨ ಮಕ್ಕಳ ನಾಟಕಗಳಲ್ಲಿ ಮೌಲ್ಯಗಳ ಪ್ರತಿಪಾದನೆ

೫.೨.೧ ಮಕ್ಕಳ ನಾಟಕಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳು

೫.೨.೨ ಮಕ್ಕಳ ನಾಟಕಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳು

೫.೨.೩ ಮಕ್ಕಳ ನಾಟಕಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳು

೫.೨.೪ ಮಕ್ಕಳ ನಾಟಕಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳು

೫.೨.೫ ಮಕ್ಕಳ ನಾಟಕಗಳಲ್ಲಿ ನೈತಿಕ ಮೌಲ್ಯಗಳು

ಅಧ್ಯಾಯ ೬: ಮಕ್ಕಳ ಕಾದಂಬರಿ ಸಾಹಿತ್ಯ: ಮೌಲ್ಯಗಳ ವಿವೇಚನೆ

೬.೧ ಪ್ರಮುಖ ಕಾದಂಬರಿಗಾರರು

೬.೨ ಕಾದಂಬರಿಗಳಲ್ಲಿ ಮೌಲ್ಯಗಳ ಪ್ರತಿಪಾದನೆ

೬.೨.೧ ಮಕ್ಕಳ ಕಾದಂಬರಿಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳು

೬.೨.೨ ಮಕ್ಕಳ ಕಾದಂಬರಿಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳು

೬.೨.೩ ಮಕ್ಕಳ ಕಾದಂಬರಿಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳು

೬.೨.೪ ಮಕ್ಕಳ ಕಾದಂಬರಿಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳು

೬.೨.೫ ಮಕ್ಕಳ ಕಾದಂಬರಿಗಳಲ್ಲಿ ನೈತಿಕ ಮೌಲ್ಯಗಳು

ಅಧ್ಯಾಯ ೭: ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ಪಲ್ಲಟಗಳು

೭.೧ ೧೯೫೦ರ ಪೂರ್ವದಲ್ಲಿ ಮಕ್ಕಳ ಸಾಹಿತ್ಯ

೭.೨ ೧೯೫೦ ರ ನಂತರದ ಸಾಹಿತ್ಯದಲ್ಲಿ ಮೌಲ್ಯಗಳ ಪಲ್ಲಟಗಳು

೭.೩ ಮೌಲ್ಯಗಳ ಪಲ್ಲಟಗಳಿಗೆ ಕಾರಣಗಳು

೭.೪ ಮೌಲ್ಯಗಳ ಪಲ್ಲಟಗಳ ಪರಿಣಾಮಗಳು

ಅಧ್ಯಾಯ ೮: ಅಧ್ಯಯನದ ಫಲಶ್ರುತಿಗಳು

೮.೧ ಅಧ್ಯಯನದ ಫಲಿತಗಳು

೮.೨ ಮುಂದಿನ ಅಧ್ಯಯನದ ಸಾಧ್ಯತೆಗಳು

ಆಕರಗಳು:

೧. ಅಧ್ಯಯನಕ್ಕೆ ಬಳಸಿದ ಮಕ್ಕಳ ಸಾಹಿತ್ಯ ಕೃತಿಗಳ ಪಟ್ಟಿ (ಮೂಲ ಪಠ್ಯ)

೨. ಪರಾಮರ್ಶನ ಗ್ರಂಥಗಳು

ಅನುಬಂಧಗಳು:

೧. ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ ರ ಮೂಲ ಮೌಲ್ಯಗಳು

೨. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕೃತರು

೩. ಸಂದರ್ಶನ/ ಮಾಹಿತಿದಾರರ ವಿವರ

ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಮೌಲ್ಯಗಳ ವಿವೇಚನೆ

ಪ್ರಸ್ತಾವನೆ

ಭಾರತದ ಮುಂದಿನ ಉಜ್ವಲವಾದ ಭವಿಷ್ಯ ಇಂದಿನ ಮಕ್ಕಳ ಕೈಯಲ್ಲಿದೆ. ಮಕ್ಕಳ ಸರ್ವತೋಮುಖ ವಿಕಾಸವಾಗುವಲ್ಲಿ ಕೇವಲ ಶಾಲಾ ಶಿಕ್ಷಣ ಮಾತ್ರವಲ್ಲದೆ ಮನೆ, ಕುಟುಂಬ, ಸಮಾಜದಲ್ಲಿ ದೊರಕುವ ಅನೌಪಚಾರಿಕ ಶಿಕ್ಷಣವೂ ಪ್ರಮುಖ ಪಾತ್ರವಹಿಸುತ್ತದೆ. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣಗಳೆರಡರಲ್ಲೂ ಮಕ್ಕಳ ಸಾಹಿತ್ಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಮಕ್ಕಳಿಗಾಗಿ ಹಿರಿಯರು ರಚಿಸಿದ ಸಾಹಿತ್ಯ ಹಾಗೂ ಮಕ್ಕಳೇ ಮಕ್ಕಳಿಗಾಗಿ ರಚಿಸಿದ ಸಾಹಿತ್ಯವನ್ನು ಸಾಮಾನ್ಯವಾಗಿ ಮಕ್ಕಳ ಸಾಹಿತ್ಯವೆನ್ನುತ್ತೇವೆ. ಈ ಸಾಹಿತ್ಯವು ಪುಟಾಣಿ ಮಕ್ಕಳಿಂದ ಹಿಡಿದು ಹದಿಹರೆಯದ ವರೆಗಿನ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿರುತ್ತದೆ. ಹುಟ್ಟಿನಿಂದ ತೊಡಗಿ ಹದಿನಾರು ವರ್ಷದವರೆಗಿನ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದ ಸಾಹಿತ್ಯವನ್ನು ಮಕ್ಕಳ ಸಾಹಿತ್ಯವೆನ್ನಬಹುದು.

ಮಗುವು ಮನೆಯಲ್ಲಿ ಎಲ್ಲರೊಂದಿಗೆ ಆಡುತ್ತಾ, ಪಾಡುತ್ತಾ, ಕುಣಿಯುತ್ತಾ ಅನೇಕ ವಿಚಾರಗಳನ್ನು ಕಲಿಯುತ್ತದೆ. ಹಿಂದೆ ಅಜ್ಜಿ ಹೇಳಿದ ಕಥೆಗಳನ್ನು ಕೇಳಿ ಬೆಳೆಯದ ಮಕ್ಕಳಿಲ್ಲ. ಅಜ್ಜಿ ಹೇಳುವ ಕಥೆಗಳು ನೀತಿಯ ಕಣಜಗಳೇ ಆಗಿವೆ. ಮಕ್ಕಳನ್ನು ಸಚ್ಚಾರಿತ್ರ್ಯವುಳ್ಳ ಪ್ರಜೆಗಳನ್ನಾಗಿಸುವಲ್ಲಿ ಅಜ್ಜಿ ಕಥೆಗಳು, ಮಕ್ಕಳ ಸಾಹಿತ್ಯ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಕ್ಕಳಲ್ಲಿ ಒಳ್ಳೆಯ ಮೌಲ್ಯಗಳನ್ನು ಬಿತ್ತುವಲ್ಲಿ, ಮೌಲ್ಯಗಳ ವರ್ಗಾವಣೆಯಲ್ಲಿ ಮಕ್ಕಳ ಸಾಹಿತ್ಯದ ಪಾತ್ರ ಮಹತ್ತರವಾದುದು.

ಅಧ್ಯಯನದ ಉದ್ದೇಶಗಳು

ಮಕ್ಕಳ ಸಾಹಿತ್ಯದ ಬಗ್ಗೆ ಈವರೆಗೆ ವ್ಯಕ್ತಿಕೇಂದ್ರಿತ ಸಾಹಿತ್ಯ ಅಧ್ಯಯನಗಳು ಸಾಕಷ್ಟು ನಡೆದಿವೆ. ಇಂದು ವಿಪುಲವಾಗಿ ಬೆಳೆಯುತ್ತಿರುವ ಮಕ್ಕಳ ಸಾಹಿತ್ಯದಲ್ಲಿ ಮೌಲ್ಯ ವ್ಯವಸ್ಥೆ ಹೇಗಿದೆ? ಮೌಲ್ಯವ್ಯವಸ್ಥೆಯಲ್ಲಿ ಬದಲಾವಣೆಗಳಾಗಿವೆಯೇ? ಆಗಿದ್ದರೆ ಕಾರಣಗಳೇನು? ಇತ್ಯಾದಿ ಅಂಶಗಳನ್ನು ಪರಿಶೀಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಆಧುನಿಕ ಮಾಧ್ಯಮ, ಜನರ ಜೀವನ ಕ್ರಮದಲ್ಲಿ ಹಾಗೂ ಧೋರಣೆಯಲ್ಲಿ ಬದಲಾವಣೆಗಳಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ಮಕ್ಕಳು

ಸಾಹಿತ್ಯದಿಂದ ದೂರ ಸರಿಯುತ್ತಿದ್ದಾರೆ. ಮಾತೃಭಾಷೆಯೊಂದಿಗಿನ ಭಾವನಾತ್ಮಕ ಸಂಬಂಧ ಶಿಥಿಲವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ನೆಲೆಯ ಅಧ್ಯಯನವು ಪ್ರಸ್ತುತವೆನಿಸುತ್ತದೆ.

ಸಾಹಿತ್ಯವು ನಿರಂತರವಾಗಿ ಬದಲಾವಣೆಯನ್ನು ಹೊಂದುತ್ತಿರುತ್ತದೆ. ಪಂಜೆಯವರ ಕಾಲದಿಂದ ಇತ್ತೀಚೆಗಿನ ವರೆಗಿನ ಮಕ್ಕಳ ಸಾಹಿತ್ಯವನ್ನು ಗಮನಿಸಿದರೆ ಕಳೆದ ಕೆಲವು ದಶಕಗಳಿಂದ ವಿಪುಲವಾಗಿ ಈ ಸಾಹಿತ್ಯ ಪ್ರಕಾರ ಬೆಳೆದುಬಂದಿರುವುದನ್ನು ಗಮನಿಸಬಹುದು. ಸಮಗ್ರ ಮಕ್ಕಳ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸುವುದು ಕಷ್ಟ. ೧೯೯೦ ರಿಂದ ಈಚೆಗಿನ ಜಾಗತೀಕರಣದ ಪ್ರಭಾವವು ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿಯ ಮೇಲಾಗಿದೆ. ಮಕ್ಕಳ ಸಾಹಿತ್ಯದ ಮೇಲೆ ಜಾಗತೀಕರಣದ ಪ್ರಭಾವವು ಸಾಪೇಕ್ಷವಾಗಿ ಮೌಲ್ಯಗಳ ಪಲ್ಲಟಗಳಿಗೆ ಕಾರಣವಾಗಿದೆ. ಮಕ್ಕಳ ಸಾಹಿತ್ಯದಲ್ಲಿ ಈ ನೆಲೆಯ ಬದಲಾವಣೆಗಳನ್ನು ಗುರುತಿಸಲಾಗಿಲ್ಲ. ಈ ಹಿನ್ನೆಲೆಯಲ್ಲಿ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದ್ದು ಅಧ್ಯಯನದ ಉದ್ದೇಶಗಳನ್ನು ಈ ರೀತಿಯಾಗಿ ಗುರುತಿಸಬಹುದು.

ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಕಥೆ, ಕವನ, ನಾಟಕ ಮತ್ತು ಕಾದಂಬರಿಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯಗಳನ್ನು ಗುರುತಿಸುವುದರೊಂದಿಗೆ ಅವುಗಳನ್ನು ವಿವೇಚಿಸಿ, ಮಕ್ಕಳ ಸಾಹಿತ್ಯ.ದ ಪ್ರಾಧಾನ್ಯವನ್ನು ತಿಳಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ೧೯೯೦– ೨೦೧೫ ರ ವರೆಗಿನ ಕಾಲಘಟ್ಟದ ಮಕ್ಕಳ ಸಾಹಿತ್ಯ ಹಿಂದಿನ ಮಕ್ಕಳ ಸಾಹಿತ್ಯಕ್ಕಿಂತ ಹೇಗೆ ಭಿನ್ನ? ಅವುಗಳ ಕಾರಣ– ಪರಿಣಾಮಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಮಕ್ಕಳ ಸಾಹಿತ್ಯದಲ್ಲಿ ಅಧ್ಯಯನ ಮಾಡುವಾಗ ೧೯೯೦–೨೦೧೫ರ ಅವಧಿಯಲ್ಲಿ ಮೊದಲ ಮುದ್ರಣವಾದ ಕೃತಿಗಳಿಗೇ ಪ್ರಾಶಸ್ತ್ಯವನ್ನು ನೀಡಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ರ ಹಿನ್ನೆಲೆಯಲ್ಲಿ ಗುರುತಿಸಲಾಗಿರುವ ೮೪ ಮೌಲ್ಯಗಳನ್ನು ಪ್ರಧಾನವಾಗಿರಿಸಿಕೊಂಡು ಅವುಗಳನ್ನು ಶಿಶುಕೇಂದ್ರಿತ, ಪೋಷಕ ಕೇಂದ್ರಿತ, ಸಮಾಜ ಕೇಂದ್ರಿತ, ಧಾರ್ಮಿಕ ಕೇಂದ್ರಿತ ಹಾಗೂ ನೈತಿಕ ಮೌಲ್ಯಗಳೆಂದು ವರ್ಗೀಕರಿಸಿ ಅಧ್ಯಯನ ಕೈಗೊಳ್ಳಲಾಗಿದೆ.

೧೯೯೦– ೨೦೧೫ ಕಾಲಘಟ್ಟದ ಸಮಗ್ರ ಸಾಹಿತ್ಯ ಕ್ಷೇತ್ರದಲ್ಲಿ ಉಂಟಾದ ಬದಲಾವಣೆಗಳನ್ನು ಮಕ್ಕಳ ಸಾಹಿತ್ಯಕ್ಕೆ ಅನ್ವಯ ಮಾಡಿ, ಕನ್ನಡ ಸಾಹಿತ್ಯದಲ್ಲಿ ನವಚಾರಿತ್ರಿಕತೆ ಆಗಿರುವಂತೆ ಮಕ್ಕಳ ಸಾಹಿತ್ಯದಲ್ಲೂ ನವಚಾರಿತ್ರಿಕತೆ ಆಗಿದೆಯೇ ಎಂದು ಪರಿಶೀಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ವಿಶಾಲವಾಗಿ ಬೆಳೆದ ಮಕ್ಕಳ ಸಾಹಿತ್ಯವನ್ನು ಒಟ್ಟಿಗೆ ಅಧ್ಯಯನಕ್ಕೆ ಒಳಪಡಿಸುವುದು ಕಷ್ಟಸಾಧ್ಯ. ನಮ್ಮ ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿಯ ಮೇಲೆ ಆದ ಜಾಗತೀಕರಣದ ಪ್ರಭಾವವು ಮಕ್ಕಳ ಸಾಹಿತ್ಯದ ಮೇಲಾಗಿ ಅದು ಸಾಪೇಕ್ಷವಾಗಿ ಮೌಲ್ಯಗಳ ಪಲ್ಲಟಗಳಿಗೆ ಕಾರಣವಾಗಿದೆ. ಮಕ್ಕಳ ಸಾಹಿತ್ಯದಲ್ಲಿ ಈ ನೆಲೆಯ ಬದಲಾವಣೆಗಳನ್ನು ಗುರುತಿಸಲಾಗಿಲ್ಲ. ಈ ಹಿನ್ನೆಲೆಯಲ್ಲಿ ೧೯೯೦ ರಿಂದ ೨೦೧೫ ವರೆಗಿನ ೨೫ ವರ್ಷಗಳ ಕಾಲಘಟ್ಟದಲ್ಲಿ ರಚನೆಯಾದ ಪ್ರಮುಖ ಮಕ್ಕಳ ಕಥೆ, ಕವನ, ನಾಟಕ, ಕಾದಂಬರಿಗಳನ್ನು ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಪ್ರಾತಿನಿಧಿಕವಾದ ಮಕ್ಕಳ ಸಾಹಿತ್ಯವನ್ನು ಈ ಅಧ್ಯಯನದ ವ್ಯಾಪ್ತಿಯಾಗಿ ಇರಿಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ

ಮಕ್ಕಳ ಮನಸ್ಸನ್ನರಿತು ಕಥೆ ಹೇಳಿದರೆ ಅವರು ಅದನ್ನು ತನ್ಮಯದಿಂದ ಕೇಳುತ್ತಾರೆ. ಮಕ್ಕಳು ಕಲ್ಪನಾ ಲೋಕದಲ್ಲಿ ವಿಹರಿಸುತ್ತಾ ತಾವೂ ಕತೆಯ ಪಾತ್ರವಾಗುತ್ತಾರೆ. ಒಂದರ್ಥದಲ್ಲಿ ಮಕ್ಕಳು ಕಥಾಲೋಕದಲ್ಲಿ ವಿಹರಿಸುತ್ತಾರೆ; ಪರಕಾಯ ಪ್ರವೇಶ ಮಾಡುತ್ತಾರೆ. ಮಕ್ಕಳು ಕಥೆಯನ್ನು ಕೇಳುತ್ತಾ ತಮ್ಮದೇ ಆದ ಲೋಕವನ್ನು ಸೃಷ್ಟಿಸುತ್ತಾರೆ. ಅಂತಹ ಶಕ್ತಿ ಕಥೆಗಳಿವೆ. ಮಗು ಕಥೆ ಹೇಳುವ ಶೈಲಿಯನ್ನು ಅನುಸರಿಸುತ್ತದೆ. ಕಥೆಯ ಪಾತ್ರಗಳನ್ನು, ಭಾವಗಳನ್ನು ಅನುಭವಿಸುತ್ತದೆ.

ಮಕ್ಕಳ ಸಾಹಿತ್ಯ ಹೇಗಿರಬೇಕೆಂಬುದಕ್ಕೆ 'ಬಾಲ ಸಾಹಿತ್ಯ' ಶೀರ್ಷಿಕೆಯಲ್ಲಿ ಪಂಜೆ ಮಂಗೇಶರಾಯರ ಅಭಿಪ್ರಾಯವನ್ನು ಗಮನಿಸಬಹುದು. "ಮಕ್ಕಳ ಕಥೆಗಳಲ್ಲಿ ಒಂದಷ್ಟು ಅದ್ಭುತ ರಸವಿರಬೇಕು. ಮಕ್ಕಳಲ್ಲಿ ಕಲ್ಪನಾಶಕ್ತಿ ಹೆಚ್ಚು. ಅದನ್ನು ಹತೋಟಿಯಲ್ಲಿಡುವಷ್ಟು ಬುದ್ಧಿಯು ಬೆಳೆದಿರುವುದಿಲ್ಲ. ಕಥೆಗಳಲ್ಲಿ ಅದ್ಭುತವಿದ್ದರೆ ಅವರ ಕಲ್ಪನಾಶಕ್ತಿಯ ಓಲಾಟಕ್ಕೆ ಅವಕಾಶವಿರುತ್ತದೆ. ಕಾಲು ತಾಗಿದರೆ ಬಾನಿಗೇರುವ ಜಮಖಾನ, ಕಿವಿ ತಿರುಗಿದರೆ ನೀರೊಳಗೆ ಹೋಗುವ ಮಾಟದ ಕುದುರೆ, ದೀಪ ಉಜ್ಜಿದರೆ ಕಣ್ಣುಮುಂದೆ ಬರುವ ಭೂತ ಮುಂತಾದ ಕಥೆಗಳು ಅವುಗಳೊಳಗಿನ ಅದ್ಭುತ ರಸದಿಂದ ಮಕ್ಕಳಿಗೆ ಪ್ರಿಯವಾಗಿರುತ್ತವೆ." (ಡಾ. ವರದಾ ಶ್ರೀನಿವಾಸ, ೨೦೦೧, ಪುಟ ೪೨)

ಮಾನವ ಸಂಘಜೀವಿ. ಮಕ್ಕಳಂತೂ ಒಂಟಿತನವನ್ನು ಇಷ್ಟಪಡುವುದೇ ಇಲ್ಲ. ಕೊರೋನಾ ಕಾರಣದಿಂದಾಗಿ ಉಂಟಾದ ಸಾಮಾಜಿಕ ಸಂದಿಗ್ಧತೆಯ ಈ ಕಾಲದಲ್ಲಿ ಎಷ್ಟೋ ಎಳೆಯ ಮಕ್ಕಳು ಶಾಲೆಯ ಮುಖವನ್ನೂ ನೋಡದೆ ಮನೆಗಳಲ್ಲೇ ಬಂಧಿಯಾಗಿದ್ದಾರೆ. ಒಂಟಿತನವು ಮಕ್ಕಳನ್ನು ಕಾಡುತ್ತಿದೆ. ಇಂತಹ ಸಂದರ್ಭದಲ್ಲಿ ಮನೆಯ ಹಿರಿಯರು ಮಕ್ಕಳ ಬಗೆಗೆ ವಿಶೇಷ ಗಮನಕೊಡಬೇಕಾದ ಅಗತ್ಯವೂ ಇದೆ. ಮಕ್ಕಳ ಮನರಂಜಿಸುವ ಮೌಲ್ಯಯುತವಾದ ಕಥೆಗಳನ್ನು

ಹೇಳುವುದರಿಂದ, ಅವರಿಗೆ ಓದಲು ಮಕ್ಕಳ ಸಾಹಿತ್ಯವನ್ನು ನೀಡುವುದರಿಂದ ಮಕ್ಕಳ ಒಂಟಿತನವನ್ನು, ಅಭದ್ರತೆಯ ಭಾವವನ್ನು ನೀಗಿಸಬಹುದು. ಇದರಿಂದ ಇಂದಿನ ಮಕ್ಕಳ ಮಾನಸಿಕ ಹಸಿವನ್ನು ನೀಗಿಸಲು ಸಾಧ್ಯ. ಮಕ್ಕಳಿಗೆ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವೇ ಇಲ್ಲ. ಸದಾ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುವುದು ಅವರ ಸಹಜಗುಣ.

ಮಕ್ಕಳಿಗೆ ಸುರಕ್ಷತೆಯ ಅರಿವು, ಸ್ವರಕ್ಷಣೆಯ ಜಾಗೃತಿ ಮೂಡಿಸಬೇಕು. ಕಥೆಗಳು, ನಾಟಕಗಳು ಮಕ್ಕಳ ಮನಸ್ಸನ್ನು ಮುಟ್ಟುತ್ತವೆ, ಮನಸ್ಸನ್ನು ತಟ್ಟುತ್ತವೆ. ಅದು ಮಕ್ಕಳ ಅರಿವಿನ ಪರಿಧಿಯನ್ನು ವಿಸ್ತರಿಸುತ್ತದೆ. ಮಕ್ಕಳ ಸಾಹಿತ್ಯದ ಓದಿನಿಂದ ಮಕ್ಕಳಲ್ಲಿ ಅರಿವನ್ನು, ಜಾಗೃತಿಯನ್ನು ಮೂಡಿಸಲು ಸಾಧ್ಯ.

ಮಕ್ಕಳ ಸಾಹಿತ್ಯದ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ನೆಲೆಯಲ್ಲಿ, ಮೌಲ್ಯಗಳ ಪಲ್ಲಟಗಳ ನೆಲೆಯಲ್ಲಿ ಈವರೆಗೆ ಅಧ್ಯಯನ ನಡೆದಿಲ್ಲ. ಕಾಲ ಬದಲಾದಂತೆ 'ಕಾಲಕ್ಕೆ ತಕ್ಕ ಕೋಲ' ಎಂಬಂತೆ ಜೀವನಕ್ರಮ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಚಿಂತನೆ, ಮೌಲ್ಯಗಳಲ್ಲೂ ಬದಲಾಗುತ್ತದೆ. ಉದಾಹರಣೆಗೆ 'ಉಳಿತಾಯ' ಒಂದು ಕಾಲದ ಪ್ರಧಾನ ಮೌಲ್ಯವಾಗಿದ್ದರೆ ಇಂದು ಅದು ತನ್ನ ಪ್ರಾಧಾನ್ಯವನ್ನು ಕಳೆದುಕೊಂಡಿದ್ದು ಭೋಗ ಸಂಸ್ಕೃತಿಯೂ ಒಂದು ಮೌಲ್ಯವಾಗಿದೆ. ಜನಪದ ಕಥೆಯ ಬುದ್ಧಿವಂತ ಕಾಗೆಯು ನೀರಿಗಾಗಿ ಹೂಜಿಗೆ ಕಲ್ಲುಗಳನ್ನು ಹಾಕಿ ನೀರು ಮೇಲೆ ಬರುವಂತೆ ಮಾಡಿ ಕುಡಿದರೆ, ಆಧುನಿಕ ಜಾಹೀರಾತಿನಲ್ಲಿ ಬುದ್ಧಿವಂತ ಕಾಗೆಯು ಬಾಟಲ್ ನ ಅಡಿಯಲ್ಲಿರುವ ನೀರನ್ನು ಸೀದಾ ಕುಟುಕಿ ಕುಡಿಯುತ್ತದೆ. ೧೯೯೦ರ ನಂತರ ಜಾಗತೀಕರಣದ ಪ್ರಭಾವ ನಮ್ಮ ಭಾಷೆ, ಸಾಹಿತ್ಯ, ಸಮಾಜ, ಸಂಸ್ಕೃತಿಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಇದನ್ನು ನಾವು ಮಕ್ಕಳ ಸಾಹಿತ್ಯದಲ್ಲೂ ಗುರುತಿಸಬಹುದು.

ಮಕ್ಕಳ ಸಾಹಿತ್ಯದಲ್ಲಿ ಕಾಲಕ್ಕನುಸಾರವಾಗಿ ಬದಲಾವಣೆಗಳಾದಂತೆ ಮೌಲ್ಯಗಳಲ್ಲಾದ ಬದಲಾವಣೆಗಳನ್ನು ಗುರುತಿಸುವುದು, ಮಕ್ಕಳ ಕಥೆ, ನಾಟಕ, ಕಾದಂಬರಿ ಇತರ ಮಕ್ಕಳ ಸಾಹಿತ್ಯವನ್ನು ವಿಶ್ಲೇಷಿಸಿ ಮೌಲ್ಯ ವ್ಯವಸ್ಥೆ, ಅವುಗಳಲ್ಲಾದ ಪಲ್ಲಟಗಳು, ಅವುಗಳ ಕಾರಣ, ಪರಿಣಾಮಗಳನ್ನು ವಿವೇಚಿಸುವುದು ಈ ಅಧ್ಯಯನದ ಉದ್ದೇಶವಾಗಿದ್ದು ಅದು ಇಂದಿನ ಅಗತ್ಯವೂ ಆಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿದ ಕಾಲಘಟ್ಟದ ಪ್ರಾತಿನಿಧಿಕ ಮಕ್ಕಳ ಸಾಹಿತ್ಯ ಕೃತಿಗಳನ್ನು ಹಾಗೂ ಕೃತಿಗಳ

ಕುರಿತು ಬಂದಿರುವ ವಿಮರ್ಶಾ ಬರಹಗಳನ್ನು, ಲೇಖನಗಳನ್ನು ಸಂಗ್ರಹಿಸಲಾಗಿದೆ. ಮಕ್ಕಳ ಸಾಹಿತಿಗಳ ಸಂದರ್ಶನ– ಆ ಮೂಲಕ ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ವಿಮರ್ಶೆ ಮಾಡಲು ಶಿಕ್ಷಣ ತಜ್ಞರ ನೆರವನ್ನು ಹಾಗೂ ಮನೋವೈಜ್ಞಾನಿಕತೆಯ ನೆಲೆಯ ಅಧ್ಯಯನಕ್ಕೆ ಶಿಶುಮನೋವಿಜ್ಞಾನವನ್ನು ಅರಿತ ತಜ್ಞರ ನೆರವನ್ನು ಪಡೆಯಲಾಗಿದೆ ಮತ್ತು ಸಂಗ್ರಹಿಸಿದ ಮಾಹಿತಿಗಳನ್ನು ಮೌಲ್ಯಗಳ ನೆಲೆಯಲ್ಲಿ ವಿಮರ್ಶಿಸಲಾಗಿದೆ. ಮಕ್ಕಳ ಸಾಹಿತ್ಯ ಕೃತಿಗಳು, ಮಕ್ಕಳ ಸಾಹಿತ್ಯ ವಿಮರ್ಶೆಯ ಬರಹಗಳು, ಮೌಲ್ಯಗಳು, ಶಿಶುಮನೋವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳನ್ನು ಈ ಅಧ್ಯಯನದ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ ರಲ್ಲಿ ಗುರುತಿಸಿದ ೮೪ ಮೌಲ್ಯಗಳನ್ನು ಈ ರೀತಿ ವರ್ಗೀಕರಿಸಿ ಮಕ್ಕಳ ಸಾಹಿತ್ಯದಲ್ಲಿರುವ ಮೌಲ್ಯಗಳ ವಿವೇಚನೆಯನ್ನು ಮಾಡಲಾಗಿದೆ.

ಶಿಶು ಕೇಂದ್ರಿತ ಮೌಲ್ಯಗಳು	**ಪೋಷಕ ಕೇಂದ್ರಿತ ಮೌಲ್ಯಗಳು**	**ಸಮಾಜ ಕೇಂದ್ರಿತ ಮೌಲ್ಯಗಳು**	**ಧಾರ್ಮಿಕ ಕೇಂದ್ರಿತ ಮೌಲ್ಯಗಳು**	**ನೈತಿಕ ಮೌಲ್ಯಗಳು**
ಭೋಗವರ್ಜನೆ ಧೈರ್ಯ ಸೌಜನ್ಯ ಕುತೂಹಲ ವ್ಯಕ್ತಿ ಗೌರವ ದೈಹಿಕ ಕಾರ್ಯದ ಬಗ್ಗೆ ಗೌರವ ಕರ್ತವ್ಯ ಪರಿಪಾಲನೆ ಶಿಸ್ತು ಅನುಭೂತಿ ಸಹನೆ ಸ್ನೇಹಶೀಲತೆ ಸ್ವಾತಂತ್ರ್ಯ ಸಭ್ಯ ನಡತೆ ಕೃತಜ್ಞತೆ ಸಹಾಯ ಮಾಡುವ ಬುದ್ಧಿ ಮಾನವತಾವಾದ ಉಪಕ್ರಮ ಋಜುತ್ವ ಆರೋಗ್ಯಕರ ಜೀವನ ಕರ್ತವ್ಯನಿಷ್ಠೆ ನಾಯಕತ್ವ ಅಹಿಂಸೆ ವಿಧೇಯತೆ	ಬಂಧುಭಾವನೆ ವೃದ್ಧರ ಬಗ್ಗೆ ಗೌರವ	ಇತರರ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರಶಂಸಿಸುವುದು ಅಸ್ಪೃಶ್ಯತಾ ವಿರೋಧಿ ಭಾವನೆ ನಾಗರಿಕತೆ ಇತರರನ್ನು ಪರಿಗಣಿಸುವುದು ಇತರರ ಬಗ್ಗೆ ಕಾಳಜಿ ವಹಿಸುವುದು ಸಹಕಾರ ಸ್ವಚ್ಛತೆ ಸಾಮೂಹಿಕ ಕಾರಣಕ್ಕಾಗಿ ಶ್ರದ್ಧೆ ಸರ್ವರ ಹಿತ ಪ್ರಜಾಪ್ರಭುತ್ವಯುತವಾದ ನಿರ್ಣಯ ಕೈಗೊಳ್ಳುವುದು ಸಮಾನತೆ ಪ್ರಗತಿಪರ ದೃಷ್ಟಿ ನ್ಯಾಯಪರತೆ ದಯೆ ಪ್ರಾಣಿದಯೆ ರಾಷ್ಟ್ರೀಯ ಕರ್ತವ್ಯ ರಾಷ್ಟ್ರೀಯ ಪ್ರಜ್ಞೆ ರಾಷ್ಟ್ರೀಯ ಭಾವೈಕ್ಯ ಶಾಂತಿ ಅನ್ಯರ ಬಗ್ಗೆ ಗೌರವ ಸಾಮಾಜಿಕ ನ್ಯಾಯ ಸಮಾಜಸೇವೆ	ಭಕ್ತಿ ಮತನಿರಪೇಕ್ಷತೆ ಮತ್ತು ಸರ್ವಧರ್ಮ ಸಮಾನತೆ	ಕರುಣೆ ಪ್ರಾಮಾಣಿಕತೆ ಸಂಭಾವಿತತನ ಸತ್ಯಸಂಧತೆ

ಸಮಯದ ಔಚಿತ್ಯಪೂರ್ಣ ವಿನಿಯೋಗ ಸಮಯಪಾಲನೆ ಪರಿಶುದ್ಧತೆ ಜ್ಞಾನಾನ್ವೇಷಣೆ ಸಮಯಸ್ಫೂರ್ತಿ ನಿಯಮಿತತನ ನಿಸ್ಪೃಹತೆ ಸರಳ ಜೀವನ ಸ್ವಯಂಶಿಸ್ತು ಸ್ವಸಹಾಯ ಆತ್ಮಗೌರವ ಆತ್ಮವಿಶ್ವಾಸ ಸ್ವಂತ ಆಧಾರ ಸ್ವಾಧ್ಯಾಯ ಆತ್ಮನಿಷ್ಠೆ ಆತ್ಮಸಂಯಮ ಆತ್ಮನಿಗ್ರಹ ಸಹಾನುಭೂತಿ ವಿಚಾರ ಮಾಡುವ ಬುದ್ಧಿ ಸತ್ಯಸಂಧತೆ		ಮಾನವಕುಲದ ಏಕತೆ ಸಾಮಾಜಿಕ ಜವಾಬ್ದಾರಿ ಪ್ರಜ್ಞೆ ಒಳ್ಳೆಯದ್ದು ಕೆಟ್ಟದ್ದರ ಕುರಿತು ತಾರತಮ್ಯ ಭಾವನೆ ಸಮಾಜವಾದ ಸಾಂಘಿಕ ಕಾರ್ಯ ತಂಡಸ್ಫೂರ್ತಿ ಸಹಿಷ್ಣುತೆ ಸಾರ್ವತ್ರಿಕ ಸ್ವಯಂಭೂ ಸತ್ಯ ವಿಶ್ವಪ್ರೇಮ ದೇಶಪ್ರೇಮ ರಾಷ್ಟ್ರೀಯ ಮತ್ತು ಸಾಮಾಜಿಕ ಸೊತ್ತುಗಳ ಬಗ್ಗೆ ಗೌರವ		

ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸುಮಾರು ೧೫೦ಕ್ಕೂ ಹೆಚ್ಚಿನ ನಾಟಕಗಳು, ೨೦೦ಕ್ಕೂ ಹೆಚ್ಚಿನ ಕಥಾಸಂಕಲನಗಳು, ನೂರಾರು ಕವನ ಸಂಕಲನಗಳು ಹಾಗೂ ಸುಮಾರು ೩೦ ರಷ್ಟು ಮಕ್ಕಳ ಕಾದಂಬರಿಗಳು ಕನ್ನಡದಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ೧೯೮೦ರ ನಂತರ ಪ್ರಕಟವಾದ ಕೃತಿಗಳೂ ಸಾಕಷ್ಟಿದ್ದು ಪಳಕಳ ಸೀತಾರಾಮ ಭಟ್ಟರ 'ಮುದ್ದುಮಲ್ಲಿ', 'ಬೆಕ್ಕಿನ ಮರಿ', 'ಆಟದ ಹುಡುಗಿಯರು', 'ಕಟಂ ಕಟಂ ಕಪ್ಪೆಯಣ್ಣ'; ಆನಂದ ಪಾಟೀಲರ 'ಮೂರು ಮೇಲೊಂದು', 'ಹತ್ತು ಹತ್ತು ಇಪ್ಪತ್ತು', ತಮ್ಮಣ್ಣ ಬೀಗಾರ ಅವರ 'ಕಪ್ಪೆಯ ಪಯಣ', 'ಹಸುರೂರಿನ ಹುಡುಗ', 'ಜಿಂಕೆ ಮರಿ', 'ಅಮ್ಮನ ಚಿತ್ರ'; ನವಗಿರಿನಂದರ 'ವಿಚಿತ್ರ ಗಿಳಿ', 'ಚಂದಮಾಮನ ಮನೆಗೆ', ರಾಮನ ಸಾಮರ್ಥ್ಯ', 'ಮಲ್ಲಿಗೆಯ

ಮಳೆ', ಬೊಳುವಾರು ಮಹಮ್ಮದ್ ಕುಂಞಿಯವರ 'ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ', ಟಿ.ಎಸ್. ನಾಗರಾಜ ಶೆಟ್ಟಿ ಅವರ 'ಕರಡಿ ರಸಾಯನ', 'ಚಿನ್ನದ ಗುಬ್ಬಿ', ನಾರಾಯಣ ರಾವ್ ಕೃ. ಅವರ 'ಮಕ್ಕಳಲ್ಲಿ ಧೈರ್ಯ ವೃದ್ಧಿಯಾಗಲು ಸಾಹಸ ಕಥೆಗಳು', 'ಪಶುಪಕ್ಷಿಗಳ ಕಥೆಗಳು', 'ಮಕ್ಕಳಿಗಾಗಿ ಮಹಾಪುರುಷರ ಜೀವನ ಕತೆಗಳು', ಸುಮತೀಂದ್ರ ನಾಡಿಗರ 'ಗೂಬೆಯ ಕಥೆ', ಹ.ಸ. ಬ್ಯಾಕೋಡ ಅವರ 'ಒಂಟಿಯಾದ ಕಪಿ', 'ಘೂ', 'ಮಾವಿನ ತೋಟದಲಿ ಹಲಸಿನ ಸುವಾಸನೆ', ಶಾಂತಾರಾಮ ಸೋಮಯಾಜಿ ಅವರ 'ಚಿಟ್ಟೆ ಹಾಡು ಮತ್ತು ಇರುವೆ ಮದುವೆ' 'ಡೊಂಕು ಬಾಲ ಮತ್ತು ಗಟ್ಟಿ ಮಿದುಳು', 'ಹೋಮೋಸೆಪಿಯನ್ಸ್ ರ ಬುದ್ಧಿವಂತಿಕೆ', ವೈದೇಹಿ ಅವರ 'ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು', ಸಂಧ್ಯಾ ಪೈಯವರ 'ಮಕ್ಕಳ ಪ್ರೀತಿಯ ಸಂಧ್ಯಾಮಾಮಿ'; ಮೊದಲಾದ ೫೮ ಕಥಾ ಸಂಕಲನಗಳ ವಿವರ ದೊರಕಿದ್ದು ಅವುಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ವೈದೇಹಿಯವರ 'ಮೂಕನ ಮಕ್ಕಳು', ಡಾ. ಆರ್.ವಿ. ಭಂಡಾರಿಯವರ 'ಬೆಳಕು ಹಂಚಿದ ಬಾಲಕ', 'ನಾನೂ ಗಾಂಧಿ ಆಗ್ತೇನೆ', 'ಬಣ್ಣದ ಹಕ್ಕಿಗಳು', 'ಈದ್ಗಾ ಮತ್ತು ಬೆಳಕಿನ ಕಡೆಗೆ', 'ಪ್ರೀತಿಯ ಕಾಳು', 'ಒಂದೇ ಬಣ್ಣದ ಹಕ್ಕಿಗಳು', 'ಬೆಳಕಿನ ಕಡೆಗೆ', 'ಹೂವಿನೊಡನೆ ಮಾತುಕತೆ', ಮೂರ್ತಿ ದೇರಾಜೆಯವರ 'ಕಪ್ಪು ಕಾಗೆಯ ಹಾಡು', ಮೊದಲಾದ ಐವತ್ತಕ್ಕೂ ಹೆಚ್ಚಿನ ನಾಟಕಗಳ ವಿವರ ಲಭ್ಯವಾಗಿದ್ದು ಪ್ರಾತಿನಿಧಿಕ ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ನಾ. ಡಿಸೋಜರ 'ಮುಳುಗಡೆ ಊರಿಗೆ ಬಂದವರು', 'ಶಾಲೆಗೆ ಹೋಗದ ಹುಡುಗಿಯರು', 'ಆನೆ ಬಂತೊಂದಾನೆ', 'ಮೀನುಗಾರ ದೊರೆ', 'ಹಕ್ಕಿಗೊಂದು ಗೂಡು ಕೊಡಿ', 'ಹಾರುವ ಹಕ್ಕಿಗೆ ಹಸಿರೆಲೆ ತೋರಣ', ಪಳಕಳ ಸೀತಾರಾಮ ಭಟ್ಟರ 'ಆನೆ ಅಣ್ಣಿ', ಜಂಬುನಾಥ ಕಂಚ್ಯಾಣಿಯವರ 'ಮಿಡಿದ ಕರುಳು', ಬಸು ಬೇವಿನಗಿಡದ ಅವರ 'ನಾಳೆಯ ಸೂರ್ಯ', ಹುಣಸೂರು ಮಾದುಪ್ರಸಾದ್ ಅವರ 'ಗೋಲಿಗೆಜ್ಜುಗದ ಹುಡುಗ', ಶಾಂತಾರಾಮ ಸೋಮಯಾಜಿ ಅವರ ಸುರಭಿ, ಜಾರುಂದೀ' ಭಾಗ ೧, 'ಸುರಭಿ, ಜಾರುಂದೀ ಮತ್ತು ಪೆಲತ್ತರಿ' ಭಾಗ ೨; ಹ.ಸ. ಬ್ಯಾಕೋಡ ಅವರ 'ಕೋಟೆಯಾದವರು', ಹಾರದಿರಲಿ ಪ್ರಾಣಪಕ್ಷಿ', 'ಆಪರೇಶನ್ ಆನೆಮಲೆ', ಬಸವರಾಜ್ ಆರ್. ಅವರ 'ಚಿನ್ನದ ನದಿಯ ದೊರೆ', ಆರ್. ಕೆ. ಶಾನುಭೋಗ ಅವರ 'ಅಂಟಾರ್ಕಟಿಕಾ' ಮೊದಲಾದ ಮಕ್ಕಳ ಕಾದಂಬರಿಗಳಿವೆ. ಈ ಮೇಲೆ ಉಲ್ಲೇಖಿಸಿದ ಕೃತಿಗಳೆಲ್ಲವೂ ೧೯೯೦ರ ನಂತರ ಮೊದಲ ಮುದ್ರಣವಾಗಿದ್ದೆಂಬುದು ಗಮನೀಯ. ಪ್ರಜಾವಾಣಿ, ವಿಜಯ ಕರ್ನಾಟಕ, ಉದಯವಾಣಿ, ವಿಜಯವಾಣಿ ಮೊದಲಾದ ದಿನಪತ್ರಿಕೆಗಳ ಮಕ್ಕಳ ಪುಟಗಳನ್ನು ಹಾಗೂ ಸುಧಾ, ತರಂಗ ಮೊದಲಾದ ವಾರಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳನ್ನು ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾದ ಮಕ್ಕಳ

ಸಾಹಿತ್ಯವನ್ನು ಸಂಕಲಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೯ ಮಕ್ಕಳ ಸಾಹಿತ್ಯ ವಾರ್ಷಿಕಗಳನ್ನು ಪ್ರಕಟಿಸಿದ್ದು ಅವುಗಳನ್ನು ಈ ಅಧ್ಯಯನಕ್ಕೆ ಆಕರಗಳನ್ನಾಗಿ ಬಳಸಲಾಗಿದೆ. ಮಕ್ಕಳ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ, ಮಕ್ಕಳ ಮನೋವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳನ್ನು ಹಾಗೂ ಮೌಲ್ಯ ಶಿಕ್ಷಣಕ್ಕೆ ಸಂಬಂಧಿಸಿದ ಕೃತಿಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ವಿಷಯಾಧಾರಿತ ಸಾಹಿತ್ಯ ಸಮೀಕ್ಷೆ

ಇಂದು ಕನ್ನಡ ಸಾಹಿತ್ಯ ಸಂಶೋಧನೆಯನ್ನು ಗಮನಿಸಿದರೆ ಮಕ್ಕಳ ಸಾಹಿತ್ಯದ ಬಗ್ಗೆ ನಡೆದ ಸಂಶೋಧನೆಗಳು, ಅಧ್ಯಯನಗಳು ಕಡಿಮೆಯೆಂದೇ ಹೇಳಬೇಕು. ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿ ಒಂದು ನಿರ್ದಿಷ್ಟ ಕಾಲಘಟ್ಟವನ್ನು ಮಾನದಂಡವಾಗಿಟ್ಟುಕೊಂಡು ಸಮಗ್ರವಾಗಿ ಅಧ್ಯಯನ ನಡೆದಿಲ್ಲ. ಮಕ್ಕಳ ಸಾಹಿತ್ಯದ ಬಗೆಗೆ ವ್ಯಕ್ತಿಕೇಂದ್ರಿತ ಅಧ್ಯಯನಗಳು ಹಲವಾರು ನಡೆದಿದ್ದು, ಈ ಅಧ್ಯಯನಕ್ಕೆ ಪೂರಕವಾಗಬಲ್ಲ ಸಂಶೋಧನಾ ಕೃತಿಗಳ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಇದುವರೆಗೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಬಗ್ಗೆ ನಡೆದ ಸಂಶೋಧನೆಗಳನ್ನು ಈ ರೀತಿಯಾಗಿ ಗುರುತಿಸಬಹುದು.

ಬಿ. ಸದಾಶಿವ ಭಟ್ ಅವರು **'ಪಂಜೆಯವರ ಸಾಹಿತ್ಯ ಕೃತಿಗಳು: ಒಂದು ಅಧ್ಯಯನ'** ಎಂಬ ವಿಷಯದಲ್ಲಿ ಗುಂಡ್ಮಿ ಚಂದ್ರಶೇಖರ ಐತಾಳರ ಮಾರ್ಗದರ್ಶನದಲ್ಲಿ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ (೧೯೮೫) ಸಲ್ಲಿಸಿರುತ್ತಾರೆ. ಪಂಜೆಯವರ ಸಮಗ್ರ ಸಾಹಿತ್ಯ ಸಂಶೋಧನೆಯನ್ನು ಮಾಡಿರುವ ಇವರು ಒಂದು ಅಧ್ಯಾಯದಲ್ಲಿ ಪಂಜೆಯವರ ಮಕ್ಕಳ ಸಾಹಿತ್ಯದ ಕುರಿತು ವಿಶ್ಲೇಷಿಸಿದ್ದಾರೆ.

'ದಕ್ಷಿಣ ಕನ್ನಡದ ಶಿಶುಗೀತಗಳು' ಎಂಬ ವಿಷಯದಲ್ಲಿ ಭಾರತೀ ದೇವಿ. ಎಂ ಅವರು ಎಂ.ಫಿಲ್ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಬಿ.ಎ. ವಿವೇಕ ರೈಯವರ ಮಾರ್ಗದರ್ಶನದಲ್ಲಿ ೧೯೯೪ ರಲ್ಲಿ ಅಧ್ಯಯನ ನಡೆಸಿ ಪ್ರೌಢ ಪ್ರಬಂಧವನ್ನು ಸಲ್ಲಿಸಿರುತ್ತಾರೆ.

'ಶಾಲಾ ಮಕ್ಕಳು ಹೇಳಿದ ಜನಪದ ಕಥೆಗಳು: ಒಂದು ಅಧ್ಯಯನ' ಕನ್ನಡ ಎಂ. ಫಿಲ್ ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ (೧೯೯೭) ರಲ್ಲಿ ಪ್ರೊ. ಕಾರ್ಲೋಸ್ ಅವರ ಮಾರ್ಗದರ್ಶನದಲ್ಲಿ ಶ್ರೀಮತಿ ಜಯಂತಿ ಅವರು ಸಂಶೋಧನೆಯನ್ನು ನಡೆಸಿರುತ್ತಾರೆ.

'ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಾಸಿ ರಂಗಭೂಮಿ' (೧೯೯೯) ಎಂಬ ವಿಷಯದಲ್ಲಿ ಡಾ. ಸಬಿಹಾ ಅವರ ಮಾರ್ಗದರ್ಶನದಲ್ಲಿ ಕೃಷ್ಣಮೂರ್ತಿಯವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಫಿಲ್ ಅಧ್ಯಯನವನ್ನು ನಡೆಸಿರುತ್ತಾರೆ. ಗದಿಗೆಪ್ಪ ಶಿವರಾಯಪ್ಪ ಜ್ಯೋತಿ ಅವರು ಪಿಎಚ್.ಡಿ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ **'ಕನ್ನಡದಲ್ಲಿ ಮಕ್ಕಳ ಗೀತ ಸಾಹಿತ್ಯ'** (೧೯೯೮) ಎಂಬ

ಸಂಶೋಧನಾ ಮಹಾಪ್ರಬಂಧವನ್ನು ರಚಿಸಿರುತ್ತಾರೆ. ಮಕ್ಕಳ ಗೀತ ಸಾಹಿತ್ಯದ ಹುಟ್ಟು, ಬೆಳವಣಿಗೆ, ಸ್ವರೂಪ ಲಕ್ಷಣಗಳ ಕುರಿತು ಅವರು ತಮ್ಮ ಮಹಾಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ. ಮಕ್ಕಳ ಗೀತ ಸಾಹಿತ್ಯದ ವರ್ಗೀಕರಣ ಹಾಗೂ ಗೀತಸಾಹಿತ್ಯದ ವಸ್ತು, ಶೈಲಿ, ತಂತ್ರಗಳ ಕುರಿತ ವಿಶ್ಲೇಷಣೆಯನ್ನು ಅವರು ಈ ಪ್ರಬಂಧದಲ್ಲಿ ಮಾಡಿದ್ದಾರೆ.

ಶ್ರೀಮತಿ ಮೈತ್ರೇಯಿಣಿ ಗು. ಗದಿಗೆಪ್ಪ ಗೌಡರ ಅವರು ಪಿಎಚ್.ಡಿ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ **'ಎಂ. ಡಿ. ಗೋಗೇರಿ: ಸಮಗ್ರ ಸಾಹಿತ್ಯ'** (೨೦೦೮) ಎಂಬ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿರುತ್ತಾರೆ. ಅವರು ತಮ್ಮ ಮಹಾಪ್ರಬಂಧದಲ್ಲಿ ಒಂದು ಅಧ್ಯಾಯದಲ್ಲಿ ಎಂ.ಡಿ. ಗೋಗೇರಿ ಅವರ ಮಕ್ಕಳ ಸಾಹಿತ್ಯದ ಕುರಿತು ವಿಶ್ಲೇಷಿಸಿದ್ದಾರೆ.

ಕೃಷ್ಣಾನಂದ ಗರ್ಡಾಡಿ ಇವರ **'ಪ. ರಾಮಕೃಷ್ಣ ಶಾಸ್ತ್ರಿಯವರ ಮಕ್ಕಳ ಸಾಹಿತ್ಯ' (೨೦೦೭)** ರಾಮಕೃಷ್ಣ ಶಾಸ್ತ್ರಿಯವರ ಸಮಗ್ರ ಮಕ್ಕಳ ಸಾಹಿತ್ಯದ ಕುರಿತಾದ ಅಧ್ಯಯನವನ್ನೊಳಗೊಂಡ ಕೃತಿ. ಕೃಷ್ಣಾನಂದ ಗರ್ಡಾಡಿ ಇವರು **'ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ: ಒಂದು ಅಧ್ಯಯನ'** (೨೦೧೯)ಎಂಬ ಸಂಶೋಧನೆಯನ್ನು ಪಿಎಚ್.ಡಿ ಪದವಿದಾಗಿ ಕಣ್ಣೂರು ವಿಶ್ವವಿದ್ಯಾನಿಲಯದಿಂದ ನಡೆಸಿರುತ್ತಾರೆ. ಈ ಕೃತಿಯಲ್ಲಿ ಕ್ರಿ.ಶ. ೧೯೮೦ ರಿಂದ ೨೦೦೦ ದ ವರೆಗಿನ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಮಕ್ಕಳ ಸಾಹಿತ್ಯದ ಕೃತಿಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.

ಡಾ. ನಿಂಗು ಸೊಲಗಿಯವರು (ನಿಂಗಪ್ಪ ಗುರುಲಿಂಗಪ್ಪ ಸೊಲಗಿ) **'ಮಕ್ಕಳ ರಂಗಭೂಮಿ: ಪ್ರದರ್ಶನ–ಪ್ರಕ್ರಿಯೆ'** ಎಂಬ ವಿಷಯದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯನ್ನು ನಡೆಸಿ ಪಿಹೆಚ್.ಡಿ ಪದವಿಯನ್ನು ಪಡೆದಿರುತ್ತಾರೆ. ಈ ಸಂಶೋಧನಾ ಮಹಾ ಪ್ರಬಂಧವು ಧಾರವಾಡದ ಚಿಲಿಪಿಲಿ ಪ್ರಕಾಶನದಿಂದ (೨೦೧೩) ಪ್ರಕಟಗೊಂಡಿದ್ದು ಮಕ್ಕಳ ರಂಗಭೂಮಿಯ ಬಗೆಗೆ ಅಧ್ಯಯನ ನಡೆಸುವವರಿಗೆ ಅತ್ಯಮೂಲ್ಯ ಕೃತಿಯಾಗಿದೆ.

ಕಾತ್ಯಾಯಿನಿ ಕುಂಜಿಬೆಟ್ಟು ಅವರು **'ಪಳಕಳ ಸೀತಾರಾಮ ಭಟ್ಟರ ಸಮಗ್ರ ಸಾಹಿತ್ಯ'** (೨೦೧೪) ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಮಣಿಪಾಲ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಮಕ್ಕಳ ಸಾಹಿತ್ಯ ಸಮೀಕ್ಷೆ, ಪಳಕಳರ ಬದುಕು– ಬರಹ, ಪಳಕಳರ ಕವನ, ನಾಟಕ, ಕಥೆ, ಪ್ರೌಢ ಕೃತಿಗಳ ವಿಮರ್ಶೆ ಈ ಸಂಶೋಧನಾ ಮಹಾಪ್ರಬಂಧದಲ್ಲಿದೆ.

ಡಾ. ನಿರುಪಮಾ ಅವರ **'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' (೨೦೦೪)** ಭಾರತೀಯ ೧೮ ಭಾಷೆಗಳ ಮಕ್ಕಳ ಸಾಹಿತ್ಯದ ವಿವರಗಳನ್ನೊಳಗೊಂಡ ಕೃತಿ. ಇದರಲ್ಲಿ ಕನ್ನಡ ಭಾಷೆಯಲ್ಲಿ ರಚಿತವಾದ ಮಕ್ಕಳ ಸಾಹಿತ್ಯದ ವಿವರಗಳಿವೆ.

ಕನ್ನಡದ ಹೆಸರಾಂತ ಮಕ್ಕಳ ಸಾಹಿತಿ ಪ್ರೊ. ಟಿ.ಎಸ್. ನಾಗರಾಜ ಶೆಟ್ಟಿಯವರ **'ಮಕ್ಕಳ ಸಾಹಿತ್ಯ: ಕೆಲವು ಅಧ್ಯಯನಗಳು' (೨೦೦೫)** ಮಕ್ಕಳ ಸಾಹಿತ್ಯದ ಅಧ್ಯಯನದ ಹಿನ್ನೆಲೆಯ ಮಹತ್ವದ ಕೃತಿ. ಅವರು ವಿವಿಧ ಸಂದರ್ಭಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿ ಮಂಡಿಸಿದ ಪ್ರಬಂಧಗಳು ಹಾಗೂ ಪತ್ರಿಕೆಗಳಿಗೆ ಬರೆದ ಲೇಖನಗಳನ್ನು ಈ ಕೃತಿ ಒಳಗೊಂಡಿದೆ.

'ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ' ಕೃತಿಯನ್ನು ಡಾ. ಸಬಿಹಾ ಭೂಮಿಗೌಡ ಸಂಪಾದಿಸಿ ೨೦೦೯ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಕೆ. ಶಿವರಾಮ ಕಾರಂತ ಅಧ್ಯಯನ ಪೀಠದಿಂದ ಪ್ರಕಟಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯದ ಬಗೆಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎರಡು ದಿನಗಳ ಕಾಲ ನಡೆದ ಕಾರ್ಯಾಗಾರದಲ್ಲಿ ಜಿಲ್ಲೆಯ ವಿವಿಧ ವಿದ್ವಾಂಸರಿಂದ ಮಂಡಿತವಾದ ೮ ಪ್ರಬಂಧಗಳನ್ನು ಈ ಕೃತಿ ಒಳಗೊಂಡಿದೆ. ಡಾ. ಮಹಾಬಲೇಶ್ವರ ರಾವ್ ಅವರ 'ಮಕ್ಕಳ ಸಾಹಿತ್ಯ– ಸೈದ್ಧಾಂತಿಕ ಅನುಸಂಧಾನ: ಪರಿಕಲ್ಪನಾತ್ಮಕ ನೆಲೆಗಳು'; ನೆಂಪು ನರಸಿಂಹ ಭಟ್ಟರ 'ಮಕ್ಕಳ ಸಾಹಿತ್ಯ– ಐತಿಹಾಸಿಕ ನೋಟ: ಏಕೀಕರಣಪೂರ್ವ ಸಾಹಿತ್ಯ'; ಡಾ. ಅಜಕ್ಕಳ ಗಿರೀಶ ಭಟ್ ಅವರ 'ಮಕ್ಕಳ ಸಾಹಿತ್ಯ– ಐತಿಹಾಸಿಕ ನೋಟ: ಏಕೀಕರಣೋತ್ತರ ಸಾಹಿತ್ಯ'; ಸಿ.ಎಚ್. ಕೃಷ್ಣಶಾಸ್ತ್ರಿ ಬಾಳಿಲ ಅವರ 'ಮಕ್ಕಳ ಸಾಹಿತ್ಯ– ಶೈಕ್ಷಣಿಕ ಅನುಸಂಧಾನ: ಏಕೀಕರಣೋತ್ತರ ಪಠ್ಯಗಳು'; ಡಾ. ಬಿ.ವಿ. ಮಹೀದಾಸ ಅವರ 'ಕಾರಂತರು ಮತ್ತು ಶಿಕ್ಷಣ: ಕಾರಂತರ ಶಿಕ್ಷಣದ ಪರಿಕಲ್ಪನೆ'; ಡಾ. ಬಿ. ಜನಾರ್ದನ ಭಟ್ ಅವರ 'ಕಾರಂತರ ಮಕ್ಕಳ ಸಾಹಿತ್ಯ'; ಡಾ. ವಸಂತ ಕುಮಾರ ಪೆರ್ಲ ಅವರ 'ಮಕ್ಕಳ ರಂಗಭೂಮಿ: ದಕ್ಷಿಣಕನ್ನಡದ ಸ್ಥಿತಿಗತಿ' ಐ.ಕೆ. ಬೊಳುವಾರು ಅವರ 'ಕಾರಂತರ ರಂಗಪ್ರಯತ್ನಗಳು'; ಪಳಕಳ ಸೀತಾರಾಮ ಭಟ್ ಅವರ 'ಮಕ್ಕಳ ಸಾಹಿತಿಯ ಅನಿಸಿಕೆಗಳು' ವಿಚಾರ ಸಂಕಿರಣದಲ್ಲಿ ಮಂಡಿತವಾದ ಮೌಲ್ಯಯುತ ಪ್ರಬಂಧಗಳಾಗಿವೆ.

ಜಿ.ಎಚ್. ನಾಯಕರು ಸಂಪಾದಿಸಿರುವ **'ಶತಮಾನದ ಕನ್ನಡ ಸಾಹಿತ್ಯ'** (೨೦೦೯) ಒಂದು ಮಹತ್ವದ ಕೃತಿ. ಇದರಲ್ಲಿ ಕನ್ನಡದ ಖ್ಯಾತ ಮಕ್ಕಳ ಸಾಹಿತಿ 'ಸಿಸು' ಸಂಗಮೇಶರ ಶತಮಾನದ ಮಕ್ಕಳ ಸಾಹಿತ್ಯ ಲೇಖನವು ಕನ್ನಡದ ಮಕ್ಕಳ ಸಾಹಿತ್ಯದ ಉದಯ ಹಾಗೂ ಕನ್ನಡದ ಪ್ರಮುಖ ಮಕ್ಕಳ ಸಾಹಿತ್ಯ ಕೃತಿಗಳ ವಿವರಗಳನ್ನೊಳಗೊಂಡಿದ್ದು ಮಕ್ಕಳ ಸಾಹಿತ್ಯದ ಅಧ್ಯಯನ ಮಾಡುವವರಿಗೆ ಪರಾಮರ್ಶನಯೋಗ್ಯ ಗ್ರಂಥವಾಗಿದೆ.

ಗಿರಿಮನೆ ಶಾಮರಾವ್ ಅವರು ಮಕ್ಕಳಿಗೆ ಸಂಬಂಧಿಸಿದಂತೆ **'ನಾವು ಮಕ್ಕಳು ಮತ್ತು ಶಿಕ್ಷಣ'** (೨೦೦೯) ಎನ್ನುವ ಕೃತಿಯನ್ನು ರಚಿಸಿದ್ದಾರೆ. ಮಕ್ಕಳ ಮನೋವಿಜ್ಞಾನ, ಶಿಕ್ಷಣಶಾಸ್ತ್ರ, ಸಮಾಜಶಾಸ್ತ್ರ ಇತ್ಯಾದಿ ಶಾಸ್ತ್ರ ಸಂಬಂಧೀ ವಿಚಾರಗಳನ್ನು ಮಾಡದೇ ತಮ್ಮ ಸ್ವಾನುಭವದಿಂದ ವಾಸ್ತವಿಕತೆಯ ನೆಲೆಗಟ್ಟಿನಲ್ಲಿ ಮಕ್ಕಳ ಬಗೆಗೆ ವಿಮರ್ಶಿಸಿದ್ದಾರೆ.

ಮಕ್ಕಳ ಸಾಹಿತ್ಯದ ಕುರಿತಾಗಿ ಆನಂದ. ವಿ. ಪಾಟೀಲರು **‘ಅಲರು’** ಎಂಬ ಕೃತಿ (೨೦೧೦) ರಚಿಸಿದ್ದಾರೆ. ಇಲ್ಲಿ ಮಕ್ಕಳ ಸಾಹಿತ್ಯದ ಪ್ರತ್ಯೇಕತೆ, ಶ್ರೇಷ್ಠತೆ, ಮಕ್ಕಳ ಕಥೆಗಳಲ್ಲಿ ವಾಸ್ತವತೆ, ಮಕ್ಕಳ ಸಾಹಿತ್ಯದ ವಿಮರ್ಶೆ ಇತ್ಯಾದಿ ಅಂಶಗಳ ಬಗೆಗೆ ವಿವೇಚಿಸಿದ್ದಾರೆ. ಮಕ್ಕಳ ಸಾಹಿತ್ಯದ ಬಗೆಗಿನ ಅಧ್ಯಯನ ನಡೆಸುವವರಿಗೆ ಇದು ಉಪಯುಕ್ತ ಕೃತಿಯಾಗಿದೆ. ಆನಂದ ಪಾಟೀಲರ **‘ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇತ್ತೀಚಿನ ಒಲವುಗಳು’** (೨೦೧೦) ಇನ್ನೊಂದು ಮಹತ್ವದ ಕೃತಿ. ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಇತ್ತೀಚೆಗೆ ಆದ ಪ್ರಮುಖ ಬದಲಾವಣೆಗಳನ್ನು ಅವರು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ನಾರಾಯಣ ಭಟ್.ಟಿ. ರಾಮಕುಂಜ ಅವರು **‘ನಮ್ಮ ಮಕ್ಕಳು ಹೇಗಿರಬೇಕು?’** (೨೦೦೯), **‘ನಮ್ಮ ಮಕ್ಕಳ ಯಶಸ್ಸು ಹೇಗೆ ಸಾಧ್ಯ?’** (೨೦೧೨), **‘ಅಮ್ಮ... ನನ್ನ ಬದುಕಿನ ಶಿಲ್ಪಿ ಅವಳು’** (೨೦೧೬), **‘ನಮ್ಮ ಮಕ್ಕಳಿಗೇನು ಕಲಿಸ್ಬೇಕು?’** (೨೦೧೩), ‘ಮೌಲ್ಯ **ಬಿಂದು’** (೨೦೧೨), **‘ಅಪ್ಪ ಅಮ್ಮ ಮಕ್ಕಳಿಗೇನು ಕಲಿಸ್ಬೇಕು?’** (೨೦೧೫), **‘ನಂಬಿಕೆಗಳಲ್ಲೇನಿದೆ?’** (೨೦೧೩), **‘ಮಕ್ಕಳ ಸಂಸ್ಕಾರಜ್ಯೋತಿ’** (೨೦೧೫), **‘ಮಕ್ಕಳು ಎಲ್ಲಿ ಹೇಗಿರ್ಬೇಕು?’** (೨೦೧೪), **‘ನಮ್ಮ ಮಕ್ಕಳ ಆರೋಗ್ಯ ಶಿಕ್ಷಣ’** (೨೦೧೫), **‘ಬದುಕಲ್ಲಿ ಗೆಲ್ಲುವುದು ಹೇಗೆ?’** (೨೦೧೪) ಮೊದಲಾದ ಅಮೂಲ್ಯ ಕೃತಿಗಳನ್ನು ರಚಿಸಿದ್ದು ಇವು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಉಪಯುಕ್ತವಾಗಬಲ್ಲವು.

ರಾಘವೇಂದ್ರ ಹೇರ್ಳೆ ಅವರ **‘ಮೌಲ್ಯ ಶಿಕ್ಷಣ’** (೨೦೧೨) ಮೌಲ್ಯಗಳ ವಿವೇಚನೆಯ ಹಿನ್ನೆಲೆಯಲ್ಲಿ ಗಮನೀಯ ಕೃತಿ. ಮೌಲ್ಯಗಳ ಪರಿಕಲ್ಪನೆ, ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯ ಹಿನ್ನೆಲೆಯಲ್ಲಿ ಗುರುತಿಸಿದ ೮೪ ಮೌಲ್ಯಗಳನ್ನು ಈ ಕೃತಿಯಲ್ಲಿ ಹೆಸರಿಸಿದ್ದು ಮೌಲ್ಯಗಳ ವಿವೇಚನೆಗೆ ಇದು ಸಹಕಾರಿಯಾಗಬಲ್ಲುದು.ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ವಿವೇಚನೆಗೆ ಸಂಬಂಧಿಸಿದಂತೆ ಈ ಮೇಲಿನ ಕೃತಿಗಳು ಗಮನಾರ್ಹವಾಗಿವೆ.

ಸಮೀಕ್ಷೆಯಿಂದ ತಿಳಿದುಕೊಂಡ ಗ್ರಹಿಕೆಗಳು

ಒಟ್ಟು ಅವಲೋಕನದ ಸಂದರ್ಭದಲ್ಲಿ ಗಮನಿಸಿದ ಪ್ರಮುಖ ಅಂಶವೆಂದರೆ ಈ ಮೇಲಿನ ಹೆಚ್ಚಿನ ಸಂಶೋಧನೆಗಳಲ್ಲಿ ಮಕ್ಕಳ ಸಾಹಿತ್ಯದ ಕುರಿತು ವ್ಯಕ್ತಿ ಕೇಂದ್ರಿತ, ಪ್ರಾದೇಶಿಕ ನೆಲೆಯ ಅಧ್ಯಯನ ನಡೆದಿರುವುದು ಕಂಡುಬಂದಿರುತ್ತದೆ. ಮಕ್ಕಳ ಸಾಹಿತ್ಯದ ಕುರಿತು ಕನ್ನಡ ಹಾಗೂ ಇತರ ಭಾಷೆಗಳಲ್ಲಿ ಸಾಕಷ್ಟು ಕೃತಿಗಳು ಬಂದಿವೆ. ಮಕ್ಕಳ ಸಾಹಿತ್ಯದ ಕುರಿತು ಬಿಡಿ ಬಿಡಿಯಾದ ಲೇಖನಗಳು ಬಂದಿವೆ. ಆದರೆ ಕನ್ನಡದ ಸಮಗ್ರ ಮಕ್ಕಳ ಸಾಹಿತ್ಯದ ಬಗೆಗೆ ಒಂದು ಕಾಲಘಟ್ಟದ ಆಧಾರದಲ್ಲಿ ಪ್ರಾತಿನಿಧಿಕವಾದ ಅಧ್ಯಯನ ನಡೆದಿಲ್ಲ.

ಮಕ್ಕಳ ಸಾಹಿತ್ಯವು ಮಕ್ಕಳಲ್ಲಿ ಓದುವ ಕೌಶಲವನ್ನು ಬೆಳೆಸುವುದರೊಂದಿಗೆ ಒಳ್ಳೆಯ ಮೌಲ್ಯಗಳ ಬೆಳವಣಿಗೆಗೆ ಕಾರಣವಾಗಿವೆ. ಇವುಗಳು ಕೇವಲ ಮಕ್ಕಳ ಮನರಂಜನೆಗಾಗಿ ಅಲ್ಲ. ಅದು ಮಕ್ಕಳಿಗೆ ಜೀವನಕ್ಕೆ, ವ್ಯಕ್ತಿತ್ವ ವಿಕಾಸಕ್ಕೆ ಅಗತ್ಯವಾದ ಮಾರ್ಗದರ್ಶನವನ್ನೊದಗಿಸುತ್ತದೆ.. ಮಕ್ಕಳ ಸಾಹಿತ್ಯದಲ್ಲಿರುವ ಪ್ರಧಾನ ಮೌಲ್ಯಗಳನ್ನು ಶಿಶು ಕೇಂದ್ರಿತ ಮೌಲ್ಯಗಳು, ಪೋಷಕ ಕೇಂದ್ರಿತ ಮೌಲ್ಯಗಳು, ಸಮಾಜ ಕೇಂದ್ರಿತ ಮೌಲ್ಯಗಳು, ಧಾರ್ಮಿಕ ಕೇಂದ್ರಿತ ಮೌಲ್ಯಗಳು ಹಾಗೂ ನೈತಿಕ ಮೌಲ್ಯಗಳು ಎಂದು ವರ್ಗೀಕರಿಸಿ ವಿವೇಚಿಸಲಾಗಿದೆ.

ಈವರೆಗಿನ ಅಧ್ಯಯನ ವಿಷಯಾಧಾರಿತ ಪ್ರಾತಿನಿಧಿಕ ಕೃತಿಗಳನ್ನು ಗಮನಿಸಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಒಟ್ಟು ಅವಲೋಕನದ ಸಂದರ್ಭದಲ್ಲಿ ಕಂಡು ಬಂದ ಪ್ರಮುಖ ಅಂಶವೆಂದರೆ ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ವಿವೇಚನೆಯ ಬಗೆಗೆ ಸಮಗ್ರವಾದ ಅಧ್ಯಯನ ನಡೆದಿಲ್ಲ. ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳು, ಮಕ್ಕಳ ಸಾಹಿತ್ಯದ ಮೇಲಾದ ಜಾಗತೀಕರಣದ ಪ್ರಭಾವ, ಮೌಲ್ಯಗಳಲ್ಲಾದ ಪಲ್ಲಟಗಳು, ಕಾರಣ– ಪರಿಣಾಮಗಳ ಹಿನ್ನೆಲೆಯ ಅಧ್ಯಯನ ನಡೆಯದ ಕಾರಣ ಈ ಅಧ್ಯಯನ ಮಹತ್ವದ್ದಾಗುತ್ತದೆ.

ಮಹಾಪ್ರಬಂಧದಲ್ಲಿ ಒಟ್ಟು ೮ ಅಧ್ಯಾಯಗಳವೆ. 'ಪ್ರಸ್ತಾವನೆ'ಯಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ಅಧ್ಯಯನದ ವ್ಯಾಪ್ತಿ ಹಾಗೂ ಅಧ್ಯಯನದ ಹಿಂದಿರುವ ತಾತ್ವಿಕತೆಯ ಬಗೆಗೆ ವಿವೇಚಿಸಲಾಗಿದೆ. ಮಕ್ಕಳ ಸಾಹಿತ್ಯದ ಕುರಿತಾಗಿ ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯ ವಿವರಗಳನ್ನೂ ಇಲ್ಲಿ ದಾಖಲಿಸಲಾಗಿದೆ.

ಅಧ್ಯಾಯ ೧

ಮಕ್ಕಳ ಸಾಹಿತ್ಯದ ಚಾರಿತ್ರಿಕ ಹಿನ್ನೆಲೆ.

ಮೊದಲನೇ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯದ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲಾಗಿದೆ. ಶಿಶು ಸಾಹಿತ್ಯ– ಮಕ್ಕಳ ಸಾಹಿತ್ಯ ವಿವೇಚನೆಯನ್ನು ಮಾಡಲಾಗಿದ್ದು ಮಕ್ಕಳ ಸಾಹಿತ್ಯದ ಪರಿಕಲ್ಪನೆಯ ಬಗೆಗಿನ ಚರ್ಚೆಯನ್ನು ಕೈಗೊಳ್ಳಲಾಗಿದೆ. ಮಕ್ಕಳ ಸಾಹಿತ್ಯ : ಮೌಲ್ಯಗಳ ಪರಿಕಲ್ಪನೆ ಹಾಗೂ ಕನ್ನಡದ ಮಕ್ಕಳ ಸಾಹಿತ್ಯದ ಮೂರು ಘಟ್ಟಗಳ ಬಗೆಗೆ, ಆ ಸಂದರ್ಭದ ಪ್ರಮುಖ ಮಕ್ಕಳ ಸಾಹಿತಿಗಳ ಬಗೆಗಿನ ಸಂಕ್ಷಿಪ್ತ ವಿವರವನ್ನು ದಾಖಲಿಸಲಾಗಿದೆ. ೧೯೬೦ ರ ಪೂರ್ವದ ಮಕ್ಕಳ ಸಾಹಿತ್ಯ ಪತ್ರಿಕೆಗಳ ಸಂಕ್ಷಿಪ್ತ ದಾಖಲೀಕರಣ ಮಾಡಲಾಗಿದೆ.

೧.೧ ಶಿಶು ಸಾಹಿತ್ಯ– ಮಕ್ಕಳ ಸಾಹಿತ್ಯ ವಿವೇಚನೆ

ಶಿಶು ಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯದ ಬಗೆಗಿನ ವ್ಯತ್ಯಾಸವನ್ನು ನಾವು ಗಮನಿಸಬೇಕಾಗಿದೆ. ಹುಟ್ಟಿದ ಮಗುವಿನಿಂದ ತೊಡಗಿ ೬ ವರ್ಷದವರೆಗಿನ ಮಕ್ಕಳ ಸಾಹಿತ್ಯವನ್ನು ನಾವು ಶಿಶು ಸಾಹಿತ್ಯ ಎಂದು ಗುರುತಿಸಬಹುದು. ಆರರಿಂದ ಹದಿನಾರು ವರ್ಷದವರೆಗಿನ ಮಕ್ಕಳಿಗೆ ಓದಿ ಅರಗಿಸಿಕೊಳ್ಳಬಹುದಾದ ಹಾಗೂ ಅವರಲ್ಲಿ ವಿಶೇಷ ಪ್ರಭಾವವನ್ನು ಬೀರಬಹುದಾದ ಸಾಹಿತ್ಯವನ್ನು ನಾವು ಮಕ್ಕಳ ಸಾಹಿತ್ಯವೆನ್ನಬಹುದು. ಈ ಪ್ರಕಾರದ ಸಾಹಿತ್ಯದಲ್ಲಿ ಕಥೆ, ಕವನ, ನಾಟಕ, ಕಾದಂಬರಿ, ವಿಜ್ಞಾನ ಸಾಹಿತ್ಯ, ಪ್ರವಾಸಕಥನ, ಜೀವನಚರಿತ್ರೆ ಮೊದಲಾದ ಸಾಹಿತ್ಯ ಪ್ರಕಾರಗಳನ್ನು ಗುರುತಿಸಬಹುದು.

ಮನೋವಿಜ್ಞಾನಿ ಎಲಿಜಬೆತ್ ಬಿ. ಹರ್ಲಾಕ್ ಸೂಚಿಸಿರುವ ಜೀವನಾವಧಿಯ ಹತ್ತು ಹಂತಗಳನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದ್ದು, ಇವುಗಳಲ್ಲಿ ಶೈಶವ (ಜನನದಿಂದ ಎರಡು ವಾರಗಳವರೆಗೆ), ಹಸುಳೆತನ (೨ನೇವಾರದ ಕೊನೆಯಿಂದ ೨ವರ್ಷಗಳವರೆಗೆ), ಪೂರ್ವಬಾಲ್ಯ (೨ವರ್ಷಗಳಿಂದ ೬ ವರ್ಷಗಳವರೆಗೆ)ದ ಹಂತಗಳಾಗಿರುತ್ತವೆ. ಈ ಮೂರು ಹಂತಗಳ ಮಕ್ಕಳಿಗೆ ಉಪಯುಕ್ತವಾಗಬಲ್ಲ ಸಾಹಿತ್ಯವನ್ನು ಶಿಶು ಸಾಹಿತ್ಯವೆಂದು ಗುರುತಿಸಬಹುದು. ಹಸುಳೆತನದಿಂದ ಹದಿನಾರು ವರ್ಷದವರೆಗಿನ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದ ಸಾಹಿತ್ಯವನ್ನು ಮಕ್ಕಳ ಸಾಹಿತ್ಯವೆಂದು ಕರೆದರೆ, ಅದರದೇ ಒಂದು ಭಾಗವಾಗಿ ಶಿಶುಸಾಹಿತ್ಯವನ್ನು ಗುರುತಿಸಬಹುದು.

ಮಕ್ಕಳ ಸಾಹಿತ್ಯವು ವಿಶಾಲವಾದ ವ್ಯಾಪ್ತಿಯನ್ನು ಒಳಗೊಂಡಿದೆ. ಶಿಶು ಸಾಹಿತ್ಯವು ಮಕ್ಕಳ ಸಾಹಿತ್ಯದ ಒಂದು ಭಾಗವಾಗಿದ್ದು; ಹುಟ್ಟಿನಿಂದ ಆರು ವರ್ಷದವರೆಗಿನ ಎಳೆಯ ಮಕ್ಕಳನ್ನು ದೃಷ್ಟಿಯಲ್ಲಿಟ್ಟು ರಚಿತವಾದ ಸಾಹಿತ್ಯ. ಶಿಶುಸಾಹಿತ್ಯದಲ್ಲಿ ಶಿಶುಗೀತೆಗಳೇ ಪ್ರಧಾನ. ಇದು ಮಕ್ಕಳಿಗೆ ಮುದ ನೀಡುತ್ತದೆ. ಮಕ್ಕಳಲ್ಲಿ ಸೃಜನಾತ್ಮಕ ಚಿಂತನೆಗಳನ್ನು ಬೆಳೆಸಲು ಸಹಕಾರಿಯಾಗಿದ್ದು, ಮಕ್ಕಳಲ್ಲಿ ಭಾಷಾ ಕೌಶಲ ಬೆಳೆಸಲು ಆಲಿಸಲು, ಸ್ಪಷ್ಟ ಉಚ್ಚಾರಣೆಯ ಅಭ್ಯಾಸಕ್ಕೆ ಸಹಕಾರಿ.

೧.೨ ಮಕ್ಕಳ ಸಾಹಿತ್ಯದ ಲಕ್ಷಣಗಳು

ಕನ್ನಡದ ಮಕ್ಕಳ ಸಾಹಿತ್ಯದ ಆದ್ಯ ಪ್ರವರ್ತಕರೆಂದೇ ಹೆಸರಾದ ಪಂಜೆ ಮಂಗೇಶರಾಯರು ೧೯೩೭ ರ ಹೈದ್ರಾಬಾದಿನ ನಾಡಹಬ್ಬದ ಭಾಷಣದಲ್ಲಿ ಅವರು ಮಕ್ಕಳ ಸಾಹಿತ್ಯದ ಲಕ್ಷಣವಾಗಿ ಎಂಟು ಸಂಗತಿಗಳನ್ನು ಪಟ್ಟಿ ಮಾಡಿದ್ದು ಅವು ಈ ಕೆಳಕಂಡಂತಿವೆ.

೧. ಮಕ್ಕಳಿಗಾಗಿ ಬರೆಯುವ ಕಥೆ/ಪದ್ಯಗಳ ವಸ್ತು ವಿಷಯಗಳು ಮಕ್ಕಳ ಪ್ರಪಂಚಕ್ಕೆ ಒಳಪಟ್ಟಿರಬೇಕು. ಅವರಿಗೆ ಪರಿಚಿತವಾಗಿರುವ, ಅವರ ಇಂದ್ರಿಯಗಳಿಗೆ ಎಟಕುವ ವಿಷಯಗಳಾಗಿರಬೇಕು.

೨. ಮಕ್ಕಳ ಸಾಹಿತ್ಯದಲ್ಲಿ ಒಂದಿಷ್ಟು ಅದ್ಭುತ ರಸವಿದ್ದರೆ ಅವರ ಕಲ್ಪನಾ ಶಕ್ತಿಗೆ ಪ್ರಚೋದನೆ ಸಿಕ್ಕುತ್ತದೆ.

೩. ಮಕ್ಕಳ ಸಾಹಿತ್ಯದಲ್ಲಿ ಧರ್ಮಬೋಧನೆ, ನೀತಿ ಬೋಧನೆ ವಾಚ್ಯವಾಗಿರವಾರದು, ಅರ್ಥಾತ್ ನೀತಿ ಹೇಳುವ ಸಲುವಾಗಿಯೇ ಕಥೆ ಅಥವಾ ಕವಿತೆಯನ್ನು ರಚಿಸಿದಂತೆ ಇರಬಾರದು.

೪. ಮಕ್ಕಳ ಸಾಹಿತ್ಯದ ಭಾಷೆ ಸುಲಭ ಹಾಗೂ ಸರಳವಾಗಿರಬೇಕು. ಶಬ್ದಗಳು ಮನೆಯಲ್ಲಿ ಬಳಸುವಂಥದಾಗಿರಬೇಕು; ವಾಕ್ಯಗಳು ದೀರ್ಘವಾಗಿರದೆ, ಸಾಕಷ್ಟು ಚಿಕ್ಕದಾಗಿರಬೇಕು.

೫. ಮಕ್ಕಳ ಕಥೆಗಳಲ್ಲಿ ನಿರೂಪಣೆಗಿಂತ ಸಂಭಾಷಣೆ ಹೆಚ್ಚಿದ್ದರೆ ಒಳ್ಳೆಯದು.

೬. ಪುನರುಕ್ತಿ ಮಕ್ಕಳಿಗೆ ಇಷ್ಟವಾಗುತ್ತದೆ. ಇದರಿಂದಾಗಿ ಅವರು ಭಾಷೆಯನ್ನು ರೂಢಿಸಿಕೊಳ್ಳಲೂ ಸಹಾಯಕವಾಗುತ್ತದೆ.

೭. ಮಕ್ಕಳ ಸಾಹಿತ್ಯದಲ್ಲಿ ಅಶ್ಲೀಲ, ಅಸಹ್ಯತೆಗಳಿಗೆ ಅವಕಾಶವಿರಬಾರದು.

೮. ಮಕ್ಕಳ ಸಾಹಿತ್ಯ ಕೃತಿಗಳನ್ನು ದೊಡ್ಡ ಅಕ್ಷರಗಳಲ್ಲಿ ಅಂದವಾಗಿ ಸಚಿತ್ರವಾಗಿ ಮುದ್ರಿಸಬೇಕು. (ಆನಂದ ಪಾಟೀಲ (ಲೇ.) ಬಸು ಬೇವಿನಗಿಡದ (ಸಂ.) ೨೦೧೫, ಪುಟ ೫೦)

ಮಕ್ಕಳ ಸಾಹಿತ್ಯದ ಲಕ್ಷಣಗಳ ಬಗೆಗೆ ಪಂಜೆಯವರು ಹೇಳಿರುವ ಈ ಮೇಲಿನ ಮಾತುಗಳು ಮಕ್ಕಳ ಸಾಹಿತ್ಯ ಹೇಗಿರಬೇಕೆಂಬುದಕ್ಕೊಂದು ಉತ್ತಮ ಮಾದರಿ.

ಸಾಹಿತ್ಯದ ಇತಿಹಾಸಕಾರರು ಮಕ್ಕಳ ಸಾಹಿತ್ಯದ ಕಡೆಗೆ ಗಮನ ಹರಿಸಿದ್ದೇ ಕಡಿಮೆ. ಕೇಂದ್ರ ಸಾಹಿತ್ಯ ಅಕಾಡೆಮಿಯವರು ಬಾಲ ಸಾಹಿತ್ಯ ಪುರಸ್ಕಾರ ಕೊಡಮಾಡತೊಡಗಿರುವುದೂ ತೀರಾ ಇತ್ತೀಚೆಗೆ. ಭಾವೀ ಜನಾಂಗವೆನಿಸುವ ಮುಂದಿನ ಪೀಳಿಗೆಯ ಸಾಹಿತ್ಯದ ಬೇರುಗಳೆನಿಸಿರುವ ಮಕ್ಕಳ ಸಾಹಿತ್ಯದ ವಿಚಾರದಲ್ಲಿ ಅಲಕ್ಷ್ಯ ಖಂಡಿತಾ ಸಲ್ಲದು.

೧.೩ ಮಕ್ಕಳ ಸಾಹಿತ್ಯ: ಮೌಲ್ಯಗಳ ಪರಿಕಲ್ಪನೆ

ಯಾವುದೇ ಬಗೆಯ ಸಾಹಿತ್ಯವಿರಲಿ ಅಲ್ಲಿ ಮನರಂಜನೆ, ವೈಚಾರಿಕತೆ, ವಿನೋದ ಏನೇ ಇದ್ದರೂ ಅದರೊಳಗೆ ಒಂದು ಸಂದೇಶ ಇದ್ದೇ ಇರುತ್ತದೆ. ಸಾಹಿತ್ಯದ ಈ ಸಂದೇಶವನ್ನೇ ನಾವು ಮೌಲ್ಯವೆಂದು ಕರೆಯುತ್ತೇವೆ.

ಮೌಲ್ಯದ ಅರ್ಥ

ಯಾವುದು ಬೆಲೆಯುಳ್ಳದ್ದೋ, ಯಾವುದು ಉಪಯುಕ್ತತೆಯನ್ನು ಹೊಂದಿದೆಯೋ ಅದೇ ಮೌಲ್ಯ. ಮೌಲ್ಯಗಳು ನಮ್ಮ ಬದುಕಿನ ಚಾಲಕ ಶಕ್ತಿ, ಬದುಕಿನ ದಾರಿದೀವಿಗೆ. ಖ್ಯಾತ ಶಿಕ್ಷಣ ಚಿಂತಕ ಜಾನ್ ಡ್ಯೂಯಿ ಅವರ ಪ್ರಕಾರ "ಮೌಲ್ಯ ಎಂದರೆ ನಾವು ಮೌಲಿಕತೆಯನ್ನು ಯಾವುದರಲ್ಲಿ ಗುರುತಿಸಿ ಮನಗಾಣುತ್ತೇವೋ, ಇತರ ಅಭಿಪ್ರಾಯ– ವಿಚಾರಗಳೊಂದಿಗೆ ಪರಸ್ಪರ ತುಲನೆ ಮಾಡಿ ಹೇಗೆ ಬೆಲೆಕಟ್ಟುತ್ತೇವೋ ಆ ಅಂಶ". (ರಾಘವೇಂದ್ರ ಹೇರ್ಳೆ, ೨೦೧೨, ಪುಟ ೨)

ಮೌಲ್ಯ ಅಂದರೆ ವ್ಯಾವಹಾರಿಕವಾಗಿ ಬೆಲೆ ಅಥವಾ ಉಪಯೋಗ ಅಥವಾ ಉಪಯುಕ್ತತೆ ಎಂದು ಹೇಳಬಹುದು. ವ್ಯಕ್ತಿಯೊಬ್ಬನಲ್ಲಿರಬೇಕಾದ ಆದರ್ಶ ಅಥವಾ ಶೀಲವೆಂದೂ ಅರ್ಥವಿದೆ.

ಮೌಲ್ಯವು ನಮ್ಮ ಬದುಕಿಗೆ ಸಾರ್ವಕಾಲಿಕ ಗೌರವವನ್ನು ತಂದುಕೊಡುವ, ಜೀವನವನ್ನು ಸಾರ್ಥಕಗೊಳಿಸುವ ಒಂದು ಅದಮ್ಯ ಶಕ್ತಿಯಾಗಿದೆ. ವ್ಯಕ್ತಿಯ ಆಲೋಚನೆಗನ್ನು ನಿಯಂತ್ರಿಸುವ, ನಿರ್ದೇಶಿಸುವ ತಾತ್ವಿಕ ಚಿಂತನೆಗಳನ್ನು ಮೌಲ್ಯಗಳೆಂದು ಕರೆಯಬಹುದು.

ಕೇವಲ ಆರ್ಥಿಕ–ವೈಜ್ಞಾನಿಕ ಪ್ರಗತಿಯಾದರೆ ಅದನ್ನು ಒಟ್ಟು ಅಭಿವೃದ್ಧಿಯ ಸೂಚ್ಯಂಕ ಎಂದು ಪರಿಗಣಿಸಲಾಗದು. ಭಾರತವು ಆರ್ಥಿಕವಾಗಿ ಹಿಂದುಳಿದ– ಮುಂದುವರಿಯುತ್ತಿರುವ ರಾಷ್ಟ್ರವಾಗಿದ್ದರೂ ಪ್ರಾಚೀನ ಕಾಲದಿಂದಲೂ ಸಾಂಸ್ಕೃತಿಕವಾಗಿ, ಮೌಲ್ಯಯುತವಾಗಿ ಅತ್ಯಂತ ಶ್ರೀಮಂತವಾದ ರಾಷ್ಟ್ರ ಎಂಬುದರಲ್ಲಿ ಸಂಶಯವಿಲ್ಲ. ಭಾರತದ ಈ ಶ್ರೀಮಂತಿಕೆಗೆ ಇಲ್ಲಿನ ಭಗವದ್ಗೀತೆ, ವೇದಗಳು, ಪುರಾಣಗಳು, ಪ್ರಾಚೀನ ಗ್ರಂಥಗಳ ತಾತ್ವಿಕ ವಿಚಾರಗಳು, ಅವುಗಳಲ್ಲಿ ಪ್ರತಿಪಾದಿತವಾದ ಮೌಲ್ಯಗಳೇ ಸಾಕ್ಷಿ. ಆದುದರಿಂದ ಭಾರತೀಯ ಮೌಲ್ಯ ಚಿಂತನೆಗೆ ಜಾಗತಿಕವಾಗಿಯೂ ಬೆಲೆ ಹೆಚ್ಚಿದೆ.

೧.೪ ಮಕ್ಕಳ ಸಾಹಿತ್ಯದ ಘಟ್ಟಗಳು

ಆರಂಭದಿಂದ ಇಂದಿನವರೆಗಿನ ಕನ್ನಡದ ಮಕ್ಕಳ ಸಾಹಿತ್ಯವನ್ನು ಗಮನಿಸಿದರೆ ಪ್ರಮುಖವಾಗಿ ಮೂರು ಘಟ್ಟಗಳನ್ನು ಗುರುತಿಸಬಹುದು.

ಮಕ್ಕಳ ಸಾಹಿತ್ಯದ ಆರಂಭದ ಘಟ್ಟ

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಜಾಗತಿಕವಾಗಿ ಮಕ್ಕಳ ಸಾಹಿತ್ಯದಲ್ಲಿ ಗಮನಾರ್ಹವಾದ ಬದಲಾವಣೆಗಳಾದವು. ಈ ಸಂದರ್ಭದಲ್ಲಿ ಜಾಗತಿಕವಾಗಿ ಮಕ್ಕಳ ಸಾಹಿತ್ಯದ ಸುವರ್ಣಯುಗವೆನಿಸುವಷ್ಟು ಸಾಹಿತ್ಯಗಳು ರಚನೆಯಾಗತೊಡಗಿದವು. ಆದರೆ ಇಪ್ಪತ್ತನೇ ಶತಮಾನದ

ಆರಂಭದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ, ಸಂಸ್ಕೃತ ಸಾಹಿತ್ಯದ ಒಡನಾಟದ ಜೊತೆಗೆ ಇಂಗ್ಲೀಷ್ ನ ಓದೂ ಹೆಚ್ಚಾಗತೊಡಗಿತು. ಇದರಿಂದಾಗಿ ಕನ್ನಡದಲ್ಲಿ ೧೯೨೦ರ ಕಾಲದಲ್ಲಿ ಕನ್ನಡದಲ್ಲಿ 'ನವೋದಯ' ಎನ್ನುವ ಸಾಹಿತ್ಯ ಪ್ರಕಾರದ ಉದಯಕ್ಕೆ ಕಾರಣವಾಯಿತು. ಆ ಸಮಯದಲ್ಲೇ ಇಂಗ್ಲೀಷ್‌ನಲ್ಲಿ ಸಾಕಷ್ಟು ಮಕ್ಕಳ ಸಾಹಿತ್ಯ ಕೃತಿಗಳು ರಚನೆಯಾಗಿ ಮಕ್ಕಳ ಸಾಹಿತ್ಯ ಕ್ಷೇತ್ರವು ದೃಢವಾಗಿ ಬೆಳೆದಿತ್ತು. ಕನ್ನಡದಲ್ಲಿ ಪ್ರಬುದ್ಧರ ಸಾಹಿತ್ಯದ ವಿಸ್ತಾರವಾದ ಓದಿನ ಜೊತೆಯಲ್ಲಿ ಮಕ್ಕಳ ಸಾಹಿತ್ಯದ ಓದಿನ ಪರಿಚಯವೂ ಆಗತೊಡಗಿತು. ಬ್ರಿಟಿಷರ ಕಾಲದ ಶಿಕ್ಷಣ ವ್ಯವಸ್ಥೆಯಿಂದಾಗಿ ಶಾಲಾ ಶಿಕ್ಷಣವೂ ವಿಸ್ತಾರವಾಗತೊಡಗಿತು. ಈ ಸಂದರ್ಭದಲ್ಲಿ ಅನೇಕರು ಮಕ್ಕಳಿಗಾಗಿ ಪಠ್ಯವನ್ನು ಸೃಷ್ಟಿಸುವ ಕಾರ್ಯವನ್ನು ಮಾಡತೊಡಗಿದರು. ಕನ್ನಡದ ನವೋದಯ ಸಾಹಿತ್ಯವು ಮಕ್ಕಳ ಸಾಹಿತ್ಯದ ಬೆಳವಣಿಗೆಗೂ ಕಾರಣವಾಯಿತು.

ಪಂಜೆಯವರಿಗಿಂತ ಪೂರ್ವದಲ್ಲಿ ಜೆ. ಮ್ಯಾಕ್ ಎಂಬವರು ೧೮೬೨ ರಲ್ಲಿ ಮಂಗಳೂರಿನಲ್ಲಿ 'ಬಾಲಗೀತೆಗಳು'ಎಂಬ ಸಂಕಲನವನ್ನು ಹೊರತಂದರಾದರೂ ಅದು ಉಪಲಬ್ಧವಲ್ಲ. ಪಂಜೆ ಮಂಗೇಶ ರಾಯರಿಂದ ತೊಡಗಿ ಐರೋಡಿ ಶಿವರಾಮಯ್ಯ, ತೋನ್ಸೆ ಮಂಗೇಶ ರಾಯರು, ಉಳ್ಳಾಲ ಮಂಗೇಶ ರಾಯರು, ಎಂ. ಎನ್. ಕಾಮತ್, ಡಾ. ಕೆ. ಶಿವರಾಮ ಕಾರಂತ, ಮಚ್ಚಿಮಲೆ ಶಂಕರ ನಾರಾಯಣ ರಾಯರು, ಜಿ.ಎನ್.ಲಕ್ಷ್ಮಣ ಪೈ, ಬೇಕಲ ರಾಮ ನಾಯಕ, ಬಿ. ಶಂಕರ ಭಟ್ಟ, ಟಿ. ಚಂದ್ರರಾಜ ಶೆಟ್ಟಿ, ದಾಮೋದರ ಬಾಳಿಗ, ಹೊನ್ನಯ್ಯ ಶೆಟ್ಟಿ, ಮುಂಡಾಜೆಯ ಬಿ. ರಾಮಚಂದ್ರ ಭಟ್ಟ, ಕಯ್ಯಾರ ಕಿಞ್ಞಣ್ಣ ರೈ, ಮಂಜೇಶ್ವರ ಗೋವಿಂದ ಪೈ, ಪಳಕಳ ಸೀತಾರಾಮ ಭಟ್ಟ, ರಸಿಕ ಪುತ್ತಿಗೆ (ಸುಬ್ರಹ್ಮಣ್ಯ ಆಚಾರ್ಯ) ಮೊದಲಾದ ಅನೇಕ ಹಿರಿಯರು ದಕ್ಷಿಣ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿ ಬೆಳಗುವಂತೆ ಮಾಡಿದ್ದಾರೆ. ಮೇವುಂಡಿ ಮಲ್ಲಾರಿ, ಜಿ.ಪಿ. ರಾಜರತ್ನಂ, ಕುವೆಂಪು ಮೊದಲಾದ ಅನೇಕ ಹಿರಿಯರು ಈ ಕಾಲಘಟ್ಟದಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹವಾದ ಕೆಲಸಗಳನ್ನು ಮಾಡಿದರು. ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪಂಜೆ ಮಂಗೇಶ ರಾಯರೇ ಆದ್ಯ ಪ್ರವರ್ತಕರೆಂದು ಕನ್ನಡ ಸಾಹಿತ್ಯಲೋಕದಲ್ಲಿ ಈಗಾಗಲೇ ಒಪ್ಪಿತವಾಗಿದ್ದು ಪಂಜೆಯವರು ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿನವರೆನ್ನುವುದು ಗಮನೀಯ. ಪಂಜೆಯವರು ಮಕ್ಕಳ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ಹಾಕಿದರು. "ಪತ್ರಿಕೆಯ ಆರಂಭ, ಹೊಸಗನ್ನಡ ಸಾಹಿತ್ಯ, ಮೊದಲ ಕಾದಂಬರಿ, ಹೀಗೆ ಎಲ್ಲದರಲ್ಲೂ ಮುಂದಿದ್ದ ತುಳುನಾಡಿನ ಪ್ರದೇಶವು ಬಾಲಸಾಹಿತ್ಯದ ತೊಟ್ಟಿಲಾಗಿದ್ದುದೂ ಸಹಜವೇ ಆಗಿದೆ" ಎಂದು ಡಾ. ಅಜಕ್ಕಳ ಗಿರೀಶ ಭಟ್ಟರು ಅಭಿಪ್ರಾಯಪಟ್ಟಿರುವುದು ಅತ್ಯಂತ ಸಮಂಜಸವಾದುದು. (ಸಬಿಹಾ ಭೂಮೀಗೌಡ (ಸಂ), ೨೦೦೯, ಪುಟ ೨೪)

೧೯೨೧ ರಲ್ಲಿ ಪಂಜೆಯವರು ಆರಂಭಿಸಿದ 'ಬಾಲ ಸಾಹಿತ್ಯ ಮಂಡಳಿ' ಯನ್ನು ಕನ್ನಡದ ಮೊದಲ ಮಕ್ಕಳ ಸಾಹಿತ್ಯ ಸಂಘಟನೆಯೆಂದು ಗುರುತಿಸಬಹುದು. ಸುಮಾರು ೪೦ ವರ್ಷಗಳ ಕಾಲ ಇದು ಮಕ್ಕಳ ಸಾಹಿತ್ಯ ಸೇವೆಯನ್ನು ಮಾಡಿರುವುದು ಗಮನೀಯ. ಇದು ಸುಮಾರು ೬೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ ಮಕ್ಕಳ ಸಾಹಿತ್ಯಲೋಕವನ್ನು ಬೆಳೆಸಿದೆ.

ಮಕ್ಕಳ ಸಾಹಿತ್ಯದ ಬೆಳವಣಿಗೆಯಲ್ಲಿ ಪಠ್ಯಪುಸ್ತಕಗಳ ಪಾತ್ರವೂ ಹಿರಿದಾದುದು. ಕನ್ನಡದ ಇತರ ಪ್ರದೇಶಗಳಿಗೆ ಹೋಲಿಸಿದರೆ ಮಕ್ಕಳಿಗಾಗಿಯೇ ಸಾಹಿತಿಗಳಿಂದ ರಚಿತವಾದ ಭಾಷಾ ಪಠ್ಯಪುಸ್ತಕಗಳ ಪ್ರಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪಾತ್ರ ಹಿರಿದಾದುದು. ಶಿವರಾಮ ಕಾರಂತರ 'ಸಿರಿಗನ್ನಡ ಪಾಠ ಮಾಲೆ' ಮತ್ತು 'ಓದುವ ಆಟ' ಪಠ್ಯಪುಸ್ತಕಗಳು ಹಾಗೂ ಕಯ್ಯಾರ ಕಿಞ್ಞಣ್ಣ ರೈ ಯವರ 'ಪದ್ಯ ಮಂಜರಿ' ಭಾಗ ೧ ಮತ್ತು ೨ ಗಮನೀಯ. ಅಧ್ಯಾಪಕರೂ ತನಿಖಾಧಿಕಾರಿಗಳಾಗಿದ್ದ ತೋನ್ಸೆ ಮಂಗೇಶ ರಾಯರು ಕಿಂಡರ್ ಗಾರ್ಟನ್ ಕೈಪಿಡಿಯನ್ನು (೧೯೦೭) ರಚಿಸಿದರು. ಉಗ್ರಾಣ ಮಂಗೇಶ ರಾಯರು ಸಂಪಾದಿಸಿದ 'ಕನ್ನಡ ನೂತನ ಪಾಠ ಮಾಲೆ'(೧೯೩೯), 'ಕಾವ್ಯ ರತ್ನಾಕರ' (೧೯೩೭) ಪಠ್ಯಗಳು ಬಂದಿರುವದೂ ಗಮನೀಯ. ಈ ಪಠ್ಯಗಳೆಲ್ಲವೂ ದಕ್ಷಿಣ ಕನ್ನಡದಲ್ಲಿ ನಡೆದ ವಿಶಿಷ್ಟ ಪ್ರಯತ್ನಗಳಾಗಿದ್ದು ಮಕ್ಕಳ ಸಾಹಿತ್ಯದ ಹಿನ್ನೆಲೆಯಲ್ಲಿ ಮಹತ್ವದ್ದಾಗಿದೆ. ೧೯೫೩ ರಲ್ಲಿ ಮಂಗಳೂರಿನಲ್ಲಿ ಸ್ಥಾಪನೆಯಾದ ಒಂದಾಣೆ ಮಾಲೆ ಪ್ರಕಾಶನ ಸಂಸ್ಥೆ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿಯೂ ಸಾಕಷ್ಟು ಕೃತಿಗಳನ್ನು ಪ್ರಕಟಿಸಿದೆ. ಮಕ್ಕಳ ಕಥೆ, ನಾಟಕಗಳನ್ನು ಕಡಿಮೆ ಬೆಲೆಗೆ ಓದುಗರಿಗೆ ಮುಟ್ಟಿಸುವಲ್ಲಿ ಇದು ಯಶಸ್ವಿಯಾಗಿದೆ.

ಮಕ್ಕಳ ಸಾಹಿತ್ಯದ ದ್ವಿತೀಯ ಘಟ್ಟ

ಮಕ್ಕಳ ಸಾಹಿತ್ಯದ ದ್ವಿತೀಯ ಕಾಲಘಟ್ಟವನ್ನು ಶಿಕ್ಷಕ ಸಾಹಿತಿಗಳ ಮುಂಚೂಣಿಯ ಘಟ್ಟವೆಂದು ಗುರುತಿಸಬಹುದು. ಸಂಗಮೇಶ ಹೊಸಮನಿ, ಶಂ.ಗು. ಬಿರಾದಾರ, ಪ.ಗು. ಸಿದ್ದಾಪುರ, ಕಾಂಚ್ಯಾಣಿ ಶರಣಪ್ಪ, ಜಂಬೂನಾಥ ಕಾಂಚ್ಯಾಣಿ, ಪಾ. ಭಿ. ಪಾಟೀಲ, ಹ.ಮ. ಪೂಜಾರ, ಪಳಕಳ ಸೀತಾರಾಮ ಭಟ್ಟ, ಮುಳಿಯ ಶಂಕರ ಭಟ್ಟ, ರಸಿಕ ಪುತ್ತಿಗೆ, ಈಶ್ವರ ಕಮ್ಮಾರ, ಎಂ.ಡಿ. ಗೋಗೇರಿ, ಎ.ಕೆ. ರಾಮೇಶ್ವರ, ಗಂಗಾಧರ ನಂದಿ ಮೊದಲಾಗಿ ಅನೇಕ ಶಿಕ್ಷಕರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದರು. ಮಕ್ಕಳ ಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ರಚಿತವಾದ ಮಕ್ಕಳ ಸಾಹಿತ್ಯದಲ್ಲಿ

ಮಕ್ಕಳ ಸಾಹಿತ್ಯದ ಮೂರನೇ ಘಟ್ಟ

ಮಕ್ಕಳ ಸಾಹಿತ್ಯದ ಮೂರನೇ ಘಟ್ಟದಲ್ಲಿ ಶಿಕ್ಷಕರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡುದಕ್ಕಿಂತಲೂ ಹೆಚ್ಚಾಗಿ ಶಿಕ್ಷಕೇತರರೂ ತೊಡಗಿಸಿಕೊಂಡರು. ಈ ಕಾಲಘಟ್ಟದಲ್ಲಿ ಡಾ.

ಆರ್.ವಿ. ಭಂಡಾರಿ, ಎಂ. ಅಬ್ದುಲ್ ರಹಿಮಾನ್ ಪಾಷಾ, ಜಂಬೂನಾಥ ಕಂಚ್ಯಾಣಿ, ಕಾಂಚ್ಯಾಣಿ ಶರಣಪ್ಪ, ತಮ್ಮಣ್ಣ ಬೀಗಾರ, ಸುಮುಖಾನಂದ ಜಲವಳ್ಳಿ, ಬೊಳುವಾರು ಮಹಮ್ಮದ್ ಕುಂಞಿ, ಐ. ಕೆ. ಬೊಳುವಾರು, ಪ.ಗು. ಸಿದ್ದಾಪುರ, ಮೂರ್ತಿ ದೇರಾಜೆ, ರಾಧೇಶ್ ತೋಳ್ಪಾಡಿ, ಹ.ಸ. ಬ್ಯಾಕೋಡ, ಶಶಿಧರ ವಿಶ್ವಾಮಿತ್ರ, ಗಣೇಶ ಪಿ. ನಾಡೋರ, ಹುಣಸೂರು ಮಾದುಪ್ರಸಾದ್, ಬಸವಣ್ಣಪ್ಪ ಕಂಬಾರ, ಗಾಯತ್ರಿ ಮೂರ್ತಿ, ನಿರುಪಮಾ, ರಾಜಶೇಖರ ಭೂಸನೂರುಮಠ, ಬಿ.ಚಂದ್ರಶೇಖರ್, ಶಾಂತಾರಾಮ ಸೋಮಯಾಜಿ ಮೊದಲಾದ ಅನೇಕರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ವೈದೇಹಿ, ಭಾಗೀರಥಿ ಹೆಗಡೆ, ಸಂಧ್ಯಾ ಪೈ, ಸವಿತಾ ಪ್ರಭಾಕರ್, ವಿಜಯಶ್ರೀ ಹಾಲಾಡಿ, ನಿರ್ಮಲಾ ಸುರತ್ಕಲ್, ಸುಧಾಮೂರ್ತಿ ಮೊದಲಾದ ಮಹಿಳಾ ಸಾಹಿತಿಗಳು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಈ ಮೇಲಿನ ಸಾಹಿತಿಗಳಲ್ಲಿ ಅನೇಕರು ಇಂದಿಗೂ ತಮ್ಮ ಸಾಹಿತ್ಯ ಸೇವೆಯನ್ನು ಮುಂದುವರಿಸುತ್ತಿದ್ದಾರೆ.

೧.೫ ೧೯೮೦ ರ ಪೂರ್ವದ ಮಕ್ಕಳ ಸಾಹಿತ್ಯ ಪತ್ರಿಕೆಗಳು

ಮಕ್ಕಳ ಸಾಹಿತ್ಯಕ್ಕೆ ಪೂರಕವಾಗಿ ಮಕ್ಕಳ ಸಾಹಿತ್ಯ ಪತ್ರಿಕೆಗಳೂ ಸಾಕಷ್ಟು ಕೊಡುಗೆಗಳನ್ನು ನೀಡಿದವು. ಮಕ್ಕಳ ಸೃಜನಶೀಲತೆಗೆ ಪ್ರೋತ್ಸಾಹವನ್ನು ಕೊಟ್ಟು ಮಕ್ಕಳನ್ನು ಚಿಂತನೆಗೆ ಹಚ್ಚಿ ಉದಯೋನ್ಮುಖ ಲೇಖಕರ ನಿರ್ಮಾಣದಲ್ಲಿ ಮಕ್ಕಳ ಸಾಹಿತ್ಯ ಪತ್ರಿಕೆಗಳ ಪಾತ್ರ ಮಹತ್ತರವಾದುದು.

ಇಲ್ಲಿ 'ಚಂದಮಾಮ' 'ಮಕ್ಕಳ ಪುಸ್ತಕ' 'ಪಾಪಚ್ಚಿ' ಮೊದಲಾದ ಮಕ್ಕಳ ಸಾಹಿತ್ಯ ಪತ್ರಿಕೆಗಳ ಸಂಕ್ಷಿಪ್ತ ವಿವರಗಳನ್ನು ದಾಖಲಿಸಲಾಗಿದೆ.

ಅಧ್ಯಾಯ ೨

ಮಕ್ಕಳ ಸಾಹಿತ್ಯ: ಜಾಗತೀಕರಣ ಮತ್ತು ನವಚಾರಿತ್ರಿಕತೆ

ಎರಡನೇ ಅಧ್ಯಾಯ 'ಮಕ್ಕಳ ಸಾಹಿತ್ಯ: ಜಾಗತೀಕರಣ ಮತ್ತು ನವಚಾರಿತ್ರಿಕತೆ'ಯಲ್ಲಿ ಜಾಗತೀಕರಣ: ಹಿನ್ನೆಲೆ, ಸ್ವರೂಪ, ಪರಿಣಾಮಗಳನ್ನು ವಿವೇಚಿಸಲಾಗಿದೆ. ಜಾಗತೀಕರಣದಿಂದಾಗಿ ಆದ ಮೌಲ್ಯ ವ್ಯವಸ್ಥೆಯ ಪಲ್ಲಟಗಳ ಬಗೆಗೆ ವಿವೇಚಿಸಲಾಗಿದೆ.

೨.೧ ಜಾಗತೀಕರಣ, ಹಿನ್ನೆಲೆ, ಸ್ವರೂಪ, ಪರಿಣಾಮ

ಭಾರತಕ್ಕೆ ವಿದೇಶೀಯರ ಆಗಮನದೊಂದಿಗೆ ಭಾರತದ ವ್ಯಾಪಾರ ವ್ಯವಹಾರಗಳು ಹೊರದೇಶಗಳೊಂದಿಗೆ ಹೆಚ್ಚಾಗತೊಡಗಿದವು. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಜಾಗತೀಕರಣವು ಕೆಲವು ವಿಚಾರಗಲ್ಲಿ ಆರ್ಥಿಕವಾಗಿ ಅಭಿವೃದ್ಧಿಗೆ ಪೂರಕವಾದರೂ, ಸಾಹಿತ್ಯಿಕ

ಹಾಗೂ ಸಾಂಸ್ಕೃತಿಕವಾಗಿ ಮಾರಕವಾಗಿಯೂ ಪರಿಣಮಿಸಿದವು. ಪರಿಣಾಮವಾಗಿ ದೇಶೀಯ, ಪ್ರಾದೇಶಿಕ ಭಾಷೆಗಳ ಪ್ರಭಾವ ಕಡಿಮೆಯಾಗಿ, ಇಂಗ್ಲಿಷ್ ಭಾಷೆಯ ಪ್ರಭಾವ ಹೆಚ್ಚಾಗತೊಡಗಿತು.

ಮಕ್ಕಳ ಸಾಹಿತ್ಯದ ಪಾತ್ರಗಳಲ್ಲಿ, ವಸ್ತುವಿನಲ್ಲಿ ಬದಲಾವಣೆ ಆಗಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಇದಕ್ಕೆ ಪೂರಕವಾಗಿ ರಘುನಾಥ ಚ. ಹ. ಅವರ 'ಪುಟ್ಟಲಕ್ಷ್ಮಿಯ ಕಥೆಗಳು' ಕಥಾಸಂಕಲನವನ್ನು ಉದಾಹರಣೆಯಾಗಿ ಗಮನಿಸಬಹುದು. ಅಲ್ಲಿ ಜಾಗತೀಕರಣ ಹಾಗೂ ಯಾಂತ್ರೀಕರಣದಿಂದಾದ ಬದಲಾವಣೆಯ ಸಂಕೇತವಾಗಿ ಜೆಸಿಬಿ ಯಂತ್ರದ ಬಗೆಗೆ ಬರುತ್ತದೆ. ಪಂಚತಂತ್ರದ ಕಥೆಗಳಲ್ಲಿ ಪ್ರಾಣಿ ಪಕ್ಷಿಗಳ ಪಾತ್ರಗಳು ಬರುವಂತೆ ಯಂತ್ರಗಳ ಪಾತ್ರಗಳು ಇಂದಿನ ಮಕ್ಕಳ ಸಾಹಿತ್ಯದಲ್ಲಿ ಬಂದಿರುವುದನ್ನು ಗುರುತಿಸಬಹುದು.

ಪರಿಣಾಮ:

ಜಾಗತೀಕರಣವು ನಮ್ಮ ರಾಷ್ಟ್ರದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಸ್ಥೆಗಳ ಮೇಲೂ ಸಾಕಷ್ಟು ಪರಿಣಾಮಗಳನ್ನು ಬೀರಿದೆ. ಜಾಗತೀಕರಣವು ಮಕ್ಕಳ ಮಾನಸಿಕ ಬೆಳವಣಿಗೆಯ ಮೇಲೆ ಹಾಗೂ ಮಕ್ಕಳು ಸಮಾಜದೊಂದಿಗೆ ಬೆರೆಯುವಲ್ಲಿ ಸಾಕಷ್ಟು ತನ್ನ ಪ್ರಭಾವವನ್ನು ಬೀರಿದೆ. ಜಾಗತೀಕರಣದಿಂದ ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲೂ ಗಣನೀಯವಾದ ಸುಧಾರಣೆ – ಬದಲಾವಣೆಗಳಾಗಿವೆ. ಅಂತೆಯೇ ಅಂಧ ನಂಬಿಕೆಗಳನ್ನು ಪೋಷಿಸುವ ಮಕ್ಕಳ ಸಾಹಿತ್ಯಗಳ ರಚನೆಯ ಬದಲಾಗಿ ಇಂದು ಆಧುನಿಕ ದೃಷ್ಟಿಕೋನದ ಬೆಳವಣಿಗೆಗೆ ಪೂರಕವಾಗುವ ಮಕ್ಕಳ ಸಾಹಿತ್ಯದ ರಚನೆ ಹೇರಳವಾಗಿ ಆಗುತ್ತಿವೆ. ಇಂದು ರಚನೆಯಾಗುತ್ತಿರುವ ಮಕ್ಕಳ ಸಾಹಿತ್ಯವು ಮಕ್ಕಳಲ್ಲಿ ಹೆಚ್ಚು ವೈಜ್ಞಾನಿಕ ಮನೋಭಾವ, ವಿಮರ್ಶಾತ್ಮಕ ಮನೋಭಾವವನ್ನು ಬೆಳೆಸುವಲ್ಲಿ ಸಹಕಾರಿಯಾಗಬಲ್ಲುದು.

೨.೨ ಜಾಗತೀಕರಣ: ಮೌಲ್ಯ ವ್ಯವಸ್ಥೆಯ ಪಲ್ಲಟ

ಹಳೆಯ ಕಾಲದ ರೂಢಿ, ಸಂಪ್ರದಾಯಗಳು, ಆಚಾರ ವಿಚಾರಗಳು ಜಾಗತೀಕರಣದ ಪ್ರಭಾವದಿಂದ ಬದಲಾಗತೊಡಗಿದವು. ಪರಿಣಾಮವಾಗಿ ಬೇರೆ ಬೇರೆ ದೇಶದ ಮಕ್ಕಳ ಸಾಹಿತ್ಯದ ಪ್ರಭಾವವು ಕನ್ನಡದ ಮಕ್ಕಳ ಸಾಹಿತ್ಯದ ಮೇಲೂ ಆಯಿತು. ಮೊದಲನೆಯದಾಗಿ ವಿವಿಧ ದೇಶಗಳ ಮಕ್ಕಳ ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿ ಅನುವಾದಗಳಾದರೆ, ಎರಡನೆಯದಾಗಿ ಹೊಸ ಕನ್ನಡದ ಮಕ್ಕಳ ಸಾಹಿತ್ಯದ ಕೃತಿಗಳ ರಚನೆಯ ಮೇಲೂ ಪ್ರಭಾವ ಬೀರಿತು.

೨.೩ ಮಕ್ಕಳ ಸಾಹಿತ್ಯದಲ್ಲಿ ನವಚಾರಿತ್ರಿಕತೆ

ಕನ್ನಡ ಸಾಹಿತ್ಯದಲ್ಲಿ ನವಚಾರಿತ್ರಿಕತೆಯ ಪಂಥವು ೨೧ನೇ ಶತಮಾನದ ಮೊದಲ ಚಳುವಳಿಯಾಗಿ ರೂಪುಗೊಂಡಿತು. ಕನ್ನಡ ಸಾಹಿತ್ಯದಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾದಂತೆ ಮಕ್ಕಳ ಸಾಹಿತ್ಯದಲ್ಲೂ ಇತ್ತೀಚೆಗೆ ಬದಲಾವಣೆಗಳಾಗುತ್ತಿವೆ. ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಮಕ್ಕಳ ಸಾಹಿತ್ಯದಲ್ಲಿ ಈ ರೀತಿಯ ಬದಲಾವಣೆಗಳನ್ನು ಗುರುತಿಸಬಹುದು. ೧೯೯೦ರ ನಂತರದ ಜಾಗತೀಕರಣದ ಪ್ರಭಾವವನ್ನು ಗುರುತಿಸಿದಂತೆ ೨೧ ನೇ ಶತಮಾನದ ನವಚಾರಿತ್ರಿಕತೆಯ ಪ್ರಭಾವವನ್ನು ಕನ್ನಡದ ಮಕ್ಕಳ ಸಾಹಿತ್ಯದಲ್ಲೂ ನಿಚ್ಚಳವಾಗಿ ಗುರುತಿಸಬಹುದು.

ಸಾಹಿತ್ಯ ಕೃತಿಯೊಂದು ಸಾಮಾಜಿಕ ಸಂದರ್ಭದ ಶಿಶುವಾಗಿದ್ದು ಸಾಹಿತ್ಯ ಕೃತಿಯೊಂದರ ಅಭಿವ್ಯಕ್ತಿಯ ಹಿಂದೆ ಚಾರಿತ್ರಿಕ, ರಾಜಕೀಯ ಕಾರಣಗಳಿರುತ್ತವೆ.   ಲೇಖಕನೊಬ್ಬನ ಜೀವನಾನುಭವ ಸಾಹಿತ್ಯ ಕೃತಿಯೊಂದರಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಇದನ್ನು ಕನ್ನಡದ ಮಕ್ಕಳ ಸಾಹಿತ್ಯದಲ್ಲೂ ಗುರುತಿಸಬಹುದು.

ಇಪ್ಪತ್ತನೇ ಶತಮಾನದಲ್ಲಿ ವಿರಳಾವಿರಳವಾಗಿದ್ದ ಕನ್ನಡದ ಮಕ್ಕಳ ಕಾದಂಬರಿ ಕ್ಷೇತ್ರವು ಇಪ್ಪತ್ತನೇ ಶತಮಾನದ ಕೊನೆಯ ದಶಕದಲ್ಲಿ ಜೀವಂತಿಕೆಯನ್ನು ಪಡೆಯುತ್ತಾ ಇಪ್ಪತ್ತೊಂದನೆಯ ಶತಮಾನದಲ್ಲಿ ವಿಶಾಲವಾಗಿ ಹೆಮ್ಮರವಾಗಿ ಬೆಳೆಯುತ್ತಿದೆ. ಇಂದು ಮಕ್ಕಳ ಸಾಹಿತ್ಯದ ವಸ್ತು, ಶೈಲಿ, ತಂತ್ರಗಳಲ್ಲೂ ಬದಲಾವಣೆಗಳು ಆಗುತ್ತಿರುವುದನ್ನು ಗುರುತಿಸಬಹುದು.   ರಮ್ಯ- ಫ್ಯಾಂಟಸಿಗಳಿಗಿಂತ ಇವತ್ತು ಸಮಾಜಮುಖಿ ಚಿಂತನೆಯ ಕಡೆಗೆ ಮುಖ ಮಾಡಿರುವುದನ್ನು ಕನ್ನಡದ ಮಕ್ಕಳ ಕಾದಂಬರಿ ಕ್ಷೇತ್ರದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ನವಚಾರಿತ್ರಿಕತೆಯ ಪರಿಕಲ್ಪನೆ ಹಾಗೂ ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ನವಚಾರಿತ್ರಿಕತೆಯ ಸುಳುಹುಗಳನ್ನು ದಾಖಲಿಸಲಾಗಿದೆ. ಡಾ. ಆರ್. ವಿ. ಭಂಡಾರಿಯವರ ನಾಟಕಗಳಲ್ಲಿ, ಕಾದಂಬರಿಗಳಲ್ಲಿ, ಬಸು ಬೇವಿನಗಿಡದ ಅವರ 'ನಾಳೆಯ ಸೂರ್ಯ', ಹುಣಸೂರು ಮಾದುಪ್ರಸಾದ್ ಅವರ ಗೋಲಿಗೆಜ್ಜುಗದ ಹುಡುಗ' ಮೊದಲಾದ ಕಾದಂಬರಿಗಳಲ್ಲಿ ನವಚಾರಿತ್ರಿಕತೆಯನ್ನು ಗುರುತಿಸಬಹುದು.

ಅಧ್ಯಾಯ ೩

ಮಕ್ಕಳ ಕಥಾ ಸಾಹಿತ್ಯ: ಮೌಲ್ಯಗಳ ವಿವೇಚನೆ

ಮೂರನೇ ಅಧ್ಯಾಯದಲ್ಲಿ ಮಕ್ಕಳ ಕಥಾ ಸಾಹಿತ್ಯದ ಮೌಲ್ಯಗಳ ವಿವೇಚನೆಯನ್ನು ಮಾಡಲಾಗಿದೆ. ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಕೆಲಸ ಮಾಡಿದ ಪ್ರಮುಖ ಕಥೆಗಾರರು ಮತ್ತು ಕಥಾ

ಸಂಕಲನಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ ರ ಹಿನ್ನೆಲೆಯಲ್ಲಿ ಮೌಲ್ಯ ವಿವೇಚನೆ ಮಾಡಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ ರಲ್ಲಿ ಗುರುತಿಸಲಾಗಿರುವ ೮೪ ಮೌಲ್ಯಗಳನ್ನು ಶಿಶು ಕೇಂದ್ರಿತ ಮೌಲ್ಯಗಳು, ಪೋಷಕ ಕೇಂದ್ರಿತ ಮೌಲ್ಯಗಳು, ಸಮಾಜ ಕೇಂದ್ರಿತ ಮೌಲ್ಯಗಳು, ಧಾರ್ಮಿಕ ಕೇಂದ್ರಿತ ಮೌಲ್ಯಗಳು ಮತ್ತು ನೈತಿಕ ಮೌಲ್ಯಗಳು ಎಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ.

ವಿವಿಧ ಕ್ರೀಡೆಗಳು ಮಕ್ಕಳಲ್ಲಿ ದೈಹಿಕ ಬೆಳವಣಿಗೆಗೆ, ಸ್ವಾಸ್ಥ್ಯಕ್ಕೆ ಪೂರಕವಾದರೆ, ಅವರೊಳಗಿನ ಬೌದ್ಧಿಕ ವಿಕಸನಕ್ಕೆ ಕಥೆಗಳು ಸಹಕಾರಿ. ಕಥೆಗಳಲ್ಲಿನ ನೀತಿ ಮಕ್ಕಳನ್ನು ಒಳ್ಳೆಯ ಜೀವನಮಾರ್ಗವನ್ನು ಅನುಸರಿಸಲು, ಒಳ್ಳೆಯ ವ್ಯಕ್ತಿತ್ವ ರೂಪಿಸಲು ಬಹಳಷ್ಟು ಸಹಾರಿಯಾಗಿದೆ.

ಕಥೆಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ವೈಯುಕ್ತಿಕವಾಗಿ ಮಕ್ಕಳ ಒಳಿತಿಗೆ ಪೂರಕವಾಗಿದ್ದರೆ ಅದನ್ನು ಶಿಶು ಕೇಂದ್ರಿತ ಮೌಲ್ಯವೆನ್ನಬಹುದು. ಅಂದರೆ ಆ ಕಥೆಯನ್ನು ಓದಿ ಅರ್ಥೈಸುವುದರ ಮೂಲಕ ಅದು ಆ ಮಕ್ಕಳಲ್ಲಿ ಪ್ರಧಾನವಾಗಿ ಅವರ ಒಳಿತಿಗೆ ಪೂರಕವಾದ ಮೌಲ್ಯಗಳ ಬೆಳವಣಿಗೆಯಾಗುತ್ತದೆ. ಇದರಿಂದ ಆಗುವ ಲಾಭದ ಹೆಚ್ಚಿನ ಪಾಲು ಆ ಮಗುವಿಗೆ, ಮಗುವಿನ ವ್ಯಕ್ತಿತ್ವಕ್ಕೆ ಸಲ್ಲುತ್ತದೆ.

೩.೧ ಪ್ರಮುಖ ಕಥೆಗಾರರು ಮತ್ತು ಕಥಾ ಸಂಕಲನಗಳು

ಕನ್ನಡದ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ ಪ್ರಮುಖ ಕತೆಗಾರರಾದ ಬೊಳುವಾರು ಮಹಮ್ಮದ್ ಕುಂಞ, ಆನಂದ ಪಾಟೀಲ, ತಮ್ಮಣ್ಣ ಬೀಗಾರ, ರಘುನಾಥ ಚ. ಹ., ಎ.ಕೆ. ರಾಮೇಶ್ವರ, ಸುಮತೀಂದ್ರ ನಾಡಿಗ ಮೊದಲಾದವರ ಸಂಕ್ಷಿಪ್ತ ಪರಿಚಯ ಹಾಗೂ ಅವರ ಪ್ರಮುಖ ಕಥಾ ಸಂಕಲನಗಳ ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ.

೩.೨ ಮಕ್ಕಳ ಕಥೆಗಳಲ್ಲಿ ಮೌಲ್ಯಗಳ ಪ್ರತಿಪಾದನೆ

ಮಕ್ಕಳ ಕಥೆಗಳಲ್ಲಿ ಪ್ರಧಾನವಾಗಿ ಪ್ರತಿಪಾದಿತವಾಗಿರುವ ಮೌಲ್ಯಗಳನ್ನು ಇಲ್ಲಿ ಶಿಶುಕೇಂದ್ರಿತ, ಪೋಷಕ ಕೇಂದ್ರಿತ, ಸಮಾಜ ಕೇಂದ್ರಿತ, ಧಾರ್ಮಿಕ ಕೇಂದ್ರಿತ ಹಾಗೂ ನೈತಿಕ ಮೌಲ್ಯಗಳೆಂದು ವರ್ಗೀಕರಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಮಕ್ಕಳ ಕಥೆಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳು

ಸುಮತೀಂದ್ರ ನಾಡಿಗರ 'ಗೂಬೆಯ ಕಥೆ', ಪಳಕಳ ಸೀತಾರಾಮ ಭಟ್ಟರ 'ಬಡವಿಯ ಒಡವೆಗಳು' ನಾರಾಯಣ ಭಟ್ ಟಿ. ರಾಮಕುಂಜ ಅವರ 'ಸಹವಾಸ ದೋಷ', ಜಿ. ವಿ. ಗಣೇಶಯ್ಯ

ಅವರ 'ವಿಚಿತ್ರ ಕುತೂಹಲಕರ ಕಥೆಗಳು', ನವಗಿರಿನಂದರ 'ತ್ಯಾಗದ ಫಲ', ಪಳಕಳ ಸೀತಾರಾಮ ಭಟ್ಟರ 'ಮುದ್ದುಮಲ್ಲಿ', ಮತ್ತೂರು ಸುಬ್ಬಣ್ಣ ಅವರ 'ವಿಚಿತ್ರ ಕಥೆಗಳು', ದೇವರ ದುಡ್ಡು', ಶಾಂತಾರಾಮ ಸೋಮಯಾಜಿ ಅವರ 'ಚಿಟ್ಟೆ ಹಾಡು ಮತ್ತು ಇರುವೆ ಮದುವೆ', ರಘುನಾಥ ಚ. ಹ. ವರ 'ಪುಟ್ಟಲಕ್ಷ್ಮಿಯ ಕಥೆಗಳು', ಜೀನಹಳ್ಳಿ ಸಿದ್ದಲಿಂಗಪ್ಪ ಅವರ 'ಬಾಳೆಹಣ್ಣು ಮಾರಿದ ಜಾಣರು', ಸವಿತಾ ಪ್ರಭಾಕರ್ ಸಂಕಲಿಸಿದ 'ಮಕ್ಕಳ ಮೋಜಿನ ಕಥೆಗಳು', ಮಕ್ಕಳ ಕಥಾಪ್ರಪಂಚ; ಕಾಂಚ್ಯಾಣಿ ಶರಣಪ್ಪ ಅವರ 'ಕುಡಿಯದ ಮನೆಯ ಕುಡಿಕೆ ನೀರು', ಆರ್. ಕೆ. ಶಾನುಭೋಗ ಅವರ 'ಸುನಾಮಿಯ ಸುಳಿಯಲ್ಲಿ', ಮೊದಲಾದ ಕಥೆಗಳಲ್ಲಿ ಶಿಶುಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕಥೆಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳು

ವೈದೇಹಿಯವರ 'ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು, 'ಚಿಕ್ಕವ್ವಾ ಚಿಕ್ಕವ್ವಾ', 'ಚಿಟ್ಟಿಬಾಲೆ', ನಾ. ಡಿಸೋಜರ 'ಪುಟ್ಟನ ಹಟ', ತಮ್ಮಣ್ಣ ಬೀಗಾರ ಅವರ 'ಅಮ್ಮನ ಚಿತ್ರ', ನಿರುಪಮಾ ಅವರ 'ಮಹಿಮೆಯ ಹಕ್ಕಿ' ಮೊದಲಾದ ಕಥೆಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕಥೆಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳು

ತಮ್ಮಣ್ಣ ಬೀಗಾರ ಅವರ 'ಹಸುರೂರಿನ ಹುಡುಗ', 'ಜಿಂಕೆ ಮರಿ', ಚಂದ್ರಶೇಖರ ಕಂಬಾರ ಅವರ 'ಇದ್ದಿಲು ರಾಜ', ಟಿ.ಎಸ್. ನಾಗರಾಜ ಶೆಟ್ಟಿಯವರ 'ಕರಡಿ ರಸಾಯನ', 'ಪ್ರಾಣಿಗಳ ಜಾತ್ರೆ', ಆನಂದ ಪಾಟೀಲರ 'ಮೂರು ಮೇಲೊಂದು', ಬೇದ್ರೆ ಮಂಜುನಾಥ್ ಅವರ 'ಸರ್ವರಿಗೂ ಸಮಪಾಲು' ಮೊದಲಾದ ಕಥೆಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳನ್ನು ಪ್ರಧಾನವವಾಗಿ ಗುರುತಿಸಲಾಗಿದೆ.

ಮಕ್ಕಳ ಕಥೆಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳು

ಪಳಕಳ ಸೀತಾರಾಮ ಭಟ್ಟರ 'ನಾಗಮಾಮ', ಸುಮತೀಂದ್ರ ನಾಡಿಗರ 'ಸಮಗಾರ ದೇವತೆಗಳು', ನಾರಾಯಣೀ ದಾಮೋದರ್ ಅವರ 'ಒಂದಾನೊಂದು ಕಾಲದಲ್ಲಿ', ಮೊದಲಾದ ಕಥೆಗಳಲ್ಲಿ ಪ್ರಧಾನವಾಗಿ ಧಾರ್ಮಿಕ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕಥೆಗಳಲ್ಲಿ ನೈತಿಕ ಮೌಲ್ಯಗಳು

ಮಕ್ಕಳಲ್ಲಿ ನೈತಿಕ ಪ್ರಜ್ಞೆಯನ್ನು ಬೆಳೆಸುವ ಮೌಲ್ಯಗಳೇ ನೈತಿಕ ಮೌಲ್ಯಗಳು. ಕಥೆಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ಮಕ್ಕಳಲ್ಲಿ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಸುಮತೀಂದ್ರ ನಾಡಿಗರ 'ಬೆಟ್ಟ ಮತ್ತು ಅಳಿಲು', 'ನರಿ ಮತ್ತು ಕೊಕ್ಕರೆ', 'ಆಮೆ ಮತ್ತು ಮೊಲ', ಬೊಳುವಾರು ಮಹಮ್ಮದ್ ಕುಂಞಿ ಅವರ 'ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ', ಸಂಕಲನದ ಕಥೆಗಳಲಲ್ಲಿ, ನವಗಿರಿನಂದರ 'ವಿಚಿತ್ರ ಗಿಳಿ', ಶಂಕರಾನಂಧರ 'ವಿಚಿತ್ರ ಸತ್ಯಗಳು' ಮೊದಲಾದ ಕಥೆಗಳಲ್ಲಿ ಪ್ರಧಾನವಾಗಿ ನೈತಿಕ ಮೌಲ್ಯಗಳನ್ನು ಗುರುತಿಸಲಾಗಿದೆ.

ಅಧ್ಯಾಯ ೪

ಮಕ್ಕಳ ಕಾವ್ಯ: ಮೌಲ್ಯಗಳ ವಿವೇಚನೆ

ನಾಲ್ಕನೇ ಅಧ್ಯಾಯದಲ್ಲಿ ಮಕ್ಕಳ ಕವನಗಳಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳ ವಿವೇಚನೆಯನ್ನು ಮಾಡಲಾಗಿದೆ. ಆನಂದ ಪಾಟೀಲ, ಶ್ರೀನಿವಾಸ ಉಡುಪ, ಭಾಗೀರಥಿ ಹೆಗಡೆ, ಕೆ.ವಿ. ತಿರುಮಲೇಶ್, ರಾಧೇಶ್ ತೋಳ್ಪಾಡಿ, ನಿರ್ಮಲಾ ಸುರತ್ಕಲ್, ಸವಿತಾ ಪ್ರಭಾಕರ್, ವಿಜಯಶ್ರೀ ಹಾಲಾಡಿ ಮೊದಲಾದವರು ಮಕ್ಕಳ ಸಾಹಿತ್ಯದಲ್ಲಿ ಹೊಸ ಸಂವೇದನೆಯ ಕವನಗಳನ್ನು ರಚಿಸುತ್ತಿದ್ದಾರೆ.

ಕನ್ನಡ ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಆಯ್ದ ಕವನಗಳನ್ನೂ ಒಳಗೊಂಡಂತೆ 'ಮಕ್ಕಳ ಸಾಹಿತ್ಯ' ಹೆಸರಿನಲ್ಲಿ ೯ ವಾರ್ಷಿಕ ಸಂಕಲನಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದ್ದು, ಅವುಗಳಲ್ಲಿನ ಕವನಗಳು ಹಾಗೂ ವಿವಿಧ ಕವಿಗಳ ಕವನ ಸಂಕಲನಗಳು, ಸಮಗ್ರ ಮಕ್ಕಳ ಸಾಹಿತ್ಯ ಕೃತಿಗಳನ್ನು ಅವಲೋಕಿಸಲಾಗಿದೆ. ಪ್ರಾತಿನಿಧಿಕ ಮಕ್ಕಳ ಕವಿತೆಗಳಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಮಕ್ಕಳ ಕವಿತೆಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳು

ಕವಿತೆಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ವೈಯಕ್ತಿಕವಾಗಿ ಮಕ್ಕಳ ಒಳಿತಿಗೆ ಪೂರಕವಾಗಿದ್ದರೆ ಅದನ್ನು 'ಶಿಶು ಕೇಂದ್ರಿತ ಮೌಲ್ಯ' ಎನ್ನಬಹುದು. ಡಾ. ಆನಂದ ಪಾಟೀಲರ 'ಸಂಡೆ ದೆವ್ವ', 'ಎಲ್‌ಕೆಜಿ ಹುಡುಗರ ಕೇಸರಿಭಾತು', ಶ್ರೀಮತಿ ಭಾಗೀರಥಿ ಹೆಗಡೆ ಅವರ 'ನಾನೂ ದೊಡ್ಡೋನಾಗಿದ್ದರೆ'. ಟಿ.ಎಸ್. ನಾಗರಾಜ ಶೆಟ್ಟಿ ಅವರ 'ಇಲಿಮರಿ ಮತ್ತು ಮೌಸು' ಮೊದಲಾದ ಕವಿತೆಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕವಿತೆಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳು

ಕವನಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ವೈಯಕ್ತಿಕವಾಗಿ ಮಕ್ಕಳ ಪೋಷಕರ ಒಳಿತಿಗೆ ಪೂರಕವಾಗಿದ್ದರೆ ಅದನ್ನು ಪೋಷಕ ಕೇಂದ್ರಿತ ಮೌಲ್ಯವೆನ್ನಬಹುದು. ಆನಂದ ಪಾಟೀಲರ 'ಎಲ್‌ಕೆಜಿ ಹುಡುಗರ ಕೇಸರಿಭಾತು', ವಿಜಯಶ್ರೀ ಹಾಲಾಡಿ ಅವರ' ಓತಿಕ್ಯಾತ ತಲೆಕುಣ್ಸಿ' ಮೊದಲಾದ ಕವನಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕವಿತೆಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳು

ಕವಿತೆಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ಸಮಾಜದ ಒಳಿತಿಗೆ ಪೂರಕವಾಗಿದ್ದರೆ ಅದನ್ನು ಸಮಾಜ ಕೇಂದ್ರಿತ ಮೌಲ್ಯವೆನ್ನಬಹುದು. ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಗೊಂಡ (೦೧/೧೧/೨೦೦೯) ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಕನ್ನಡವೆಂದರೆ..' ಶ್ರೀನಿವಾಸ ಉಡುಪರ 'ಆಟೋ ಮಾಮನಿಗೆ..' ಮೊದಲಾದ ಕವನಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕವಿತೆಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳು

ಕವಿತೆಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ಧರ್ಮಜಾಗೃತಿಗೆ ಪೂರಕವಾಗಿದ್ದರೆ ಅದನ್ನು ಧಾರ್ಮಿಕ ಕೇಂದ್ರಿತ ಮೌಲ್ಯವೆನ್ನಬಹುದು. ವಿದ್ವಾನ್ ಮಧುರಕಾನನ ಗೋಪಾಲಕೃಷ್ಣ ಭಟ್ ಅವರ 'ಮಕ್ಕಳ ರಾಮಾಯಣ ಚೌಪದಿ ಮಹಾಕಾವ್ಯ'ದಲ್ಲಿ ಪ್ರಧಾನವಾಗಿ ಧಾರ್ಮಿಕ ಕವನಗಳನ್ನು ಕಾಣಬಹುದು.

ಮಕ್ಕಳ ಕವಿತೆಗಳಲ್ಲಿ ನೈತಿಕ ಮೌಲ್ಯಗಳು

ಕವಿತೆಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ನೈತಿಕ ಜಾಗೃತಿಗೆ ಪೂರಕವಾಗಿದ್ದರೆ ಅದನ್ನು ನೈತಿಕ ಮೌಲ್ಯ ಎನ್ನಬಹುದು. ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಪಂಪನ ಆದಿಪುರಾಣದ ಕಥಾವಸ್ತುವನ್ನು ಆಯ್ದು ರಚಿಸಿದ 'ಮಕ್ಕಳಿಗಾಗಿ ಅಣ್ಣ ತಮ್ಮಂದಿರ ಕಥೆ' ಎಂಬ ಕವನದಲ್ಲಿ ನೈತಿಕ ಮೌಲ್ಯವನ್ನು ಪ್ರಧಾನವಾಗಿ ಗುರುತಿಸಬಹುದು.

ಅಧ್ಯಾಯ ೫

ಮಕ್ಕಳ ನಾಟಕ ಸಾಹಿತ್ಯ: ಮೌಲ್ಯಗಳ ವಿವೇಚನೆ

ಐದನೇ ಅಧ್ಯಾಯದಲ್ಲಿ ಮಕ್ಕಳ ನಾಟಕ ಸಾಹಿತ್ಯ: ಮೌಲ್ಯಗಳ ವಿವೇಚನೆಯನ್ನು ಮಾಡಲಾಗಿದೆ. ಕನ್ನಡದ ಮಕ್ಕಳ ಸಾಹಿತ್ಯದ ಪ್ರಮುಖ ನಾಟಕಗಾರರ ಸಂಕ್ಷಿಪ್ತ ಪರಿಚಯದೊಂದಿಗೆ ಪ್ರಾತಿನಿಧಿಕ ನಾಟಕಗಳ ಮೌಲ್ಯವಿವೇಚನೆಯನ್ನು ಮಾಡಲಾಗಿದೆ.

೫.೧ ಪ್ರಮುಖ ನಾಟಕಗಾರರು ಮತ್ತು ನಾಟಕಗಳು

೧೯೧೮ ರಲ್ಲಿ ಪ್ರಕಟವಾದ ಎಂ.ಎನ್. ಕಾಮತರ 'ಶುಕ ಶಿಕ್ಷಣ' ಕನ್ನಡದಲ್ಲಿ ಪ್ರಕಟವಾದ ಮೊದಲ ಮಕ್ಕಳ ನಾಟಕ. ಇದು ರವೀಂದ್ರನಾಥ ಠಾಗೋರರ ಪ್ಯಾರೋಟ್ಸ್ ಟ್ರೇನಿಂಗ್ ಕಥೆಯಾಧಾರಿತ ನಾಟಕ.

ಕುವೆಂಪು, ಎಂ.ಎನ್. ಕಾಮತ್, ಶಿವರಾಮ ಕಾರಂತ, ದ.ರಾ. ಬೇಂದ್ರೆ, ಟಿ.ಪಿ.ಕೈಲಾಸಂ, ಮೇವುಂಡಿ ಮಲ್ಲಾರಿ ಮೊದಲಾದ ಅನೇಕ ಹಿರಿಯರು ಮಕ್ಕಳ ನಾಟಕಗಳನ್ನು ರಚಿಸಿದ್ದಾರೆ. ವೈದೇಹಿಯವರ 'ಮೂಕನ ಮಕ್ಕಳು', ಡಾ. ಆರ್.ವಿ. ಭಂಡಾರಿಯವರ 'ಬೆಳಕು ಹಂಚಿದ ಬಾಲಕ', 'ನಾನೂ ಗಾಂಧಿ ಆಗ್ತೇನೆ', 'ಬಣ್ಣದ ಹಕ್ಕಿಗಳು', 'ಈದ್ಗಾ ಮತ್ತು ಬೆಳಕಿನ ಕಡೆಗೆ', 'ಪ್ರೀತಿಯ ಕಾಳು', 'ಒಂದೇ ಬಣ್ಣದ ಹಕ್ಕಿಗಳು', 'ಬೆಳಕಿನ ಕಡೆಗೆ', 'ಹೂವಿನೊಡನೆ ಮಾತುಕತೆ', ಮೂರ್ತಿ ದೇರಾಜೆಯವರ 'ಕಪ್ಪು ಕಾಗೆಯ ಹಾಡು', ಮೊದಲಾದವು ಆಧುನಿಕ ಕಾಲಘಟ್ಟದ ಕನ್ನಡದ ಪ್ರಮುಖ ಮಕ್ಕಳ ನಾಟಕಗಳು.

೫.೨ ನಾಟಕಗಳಲ್ಲಿ ಮೌಲ್ಯಗಳ ಪ್ರತಿಪಾದನೆ

ಮಕ್ಕಳ ನಾಟಕಗಳಲ್ಲಿರುವ ಪ್ರಧಾನ ಮೌಲ್ಯಗಳನ್ನು ಶಿಶು ಕೇಂದ್ರಿತ ಮೌಲ್ಯಗಳು, ಪೋಷಕ ಕೇಂದ್ರಿತ ಮೌಲ್ಯಗಳು, ಸಮಾಜ ಕೇಂದ್ರಿತ ಮೌಲ್ಯಗಳು, ಧಾರ್ಮಿಕ ಕೇಂದ್ರಿತ ಮೌಲ್ಯಗಳು ಹಾಗೂ ನೈತಿಕ ಮೌಲ್ಯಗಳು ಎಂದು ಈ ರೀತಿಯಾಗಿ ವರ್ಗೀಕರಿಸಿ ಮಕ್ಕಳ ನಾಟಕಗಳ ಮೌಲ್ಯ ವಿವೇಚನೆಯನ್ನು ಮಾಡಲಾಗಿದೆ.

ಶಿಶು ಕೇಂದ್ರಿತ ಮೌಲ್ಯಗಳು

ಮಕ್ಕಳ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ವೈಯುಕ್ತಿಕವಾಗಿ ಮಕ್ಕಳ ಒಳಿತಿಗೆ ಪೂರಕವಾಗಿದ್ದರೆ ಅದನ್ನು ಶಿಶು ಕೇಂದ್ರಿತ ಮೌಲ್ಯವೆನ್ನಬಹುದು. ವೈದೇಹಿಯವರ 'ಮೂಕನ ಮಕ್ಕಳು', ವಸುಂಧರಾ ಭೂಪತಿ ಅವರ 'ಹದಿಹರೆಯ ಸವಿಸಮಯ' ಎಸ್. ಮಾಲತಿ ಅವರ

‘ತಿರುಕನ ಕನಸು’, ಆರ್.ಕೆ.ಶಾನುಭೋಗರ ‘ಅಪೂರ್ವ’, ಮೊದಲಾದ ನಾಟಕಗಳಲ್ಲಿ ಶಿಶುಕೇಂದ್ರಿತ ಮೌಲ್ಯಗಳನ್ನು ಗುರುತಿಸಬಹುದು.

ಪೋಷಕ ಕೇಂದ್ರಿತ ಮೌಲ್ಯಗಳು

ಮಕ್ಕಳ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ವೈಯುಕ್ತಿಕವಾಗಿ ಮಕ್ಕಳ ಪೋಷಕರ ಒಳಿತಿಗೆ ಪೂರಕವಾಗಿದ್ದರೆ ಅದನ್ನು ಪೋಷಕ ಕೇಂದ್ರಿತ ಮೌಲ್ಯವೆನ್ನಬಹುದು. ಭರತ್ ಸ. ಜಗನ್ನಾಥ ಅವರ ‘ಕೂಡಿಬಾಳೋಣ’ ಕಿರುನಾಟಕದಲ್ಲಿ ಹಳ್ಳಿಯ ವ್ಯಕ್ತಿಯೊಬ್ಬನು ಪೇಟೆಯ ಬದುಕಿಗೆ ಮಾರುಹೋಗಿ, ತನ್ನ ವೃದ್ಧ ತಂದೆ, ತಾಯಿಯ ಮಾತನ್ನೂ ಲೆಕ್ಕಿಸದೆ, ಅವರನ್ನು ಬಿಟ್ಟು ಕುಟುಂಬ ಸಮೇತ ಪೇಟೆಗೆ ಹೋಗುತ್ತಾನೆ. ಮತ್ತೆ ತನ್ನ ತಂದೆಗೆ ಹುಷಾರಿಲ್ಲದ ವಿಚಾರ ಪತ್ರಮುಖೇನ ತಿಳಿದ ನಂತರ ಊರಿಗೆ ಬಂದು ಸಾಹುಕಾರನ ಮಾತಿನಂತೆ ಊರಲ್ಲೇ ತನ್ನ ವೃದ್ಧ ತಂದೆ ತಾಯಿಯರೊಂದಿಗೆ ನೆಲೆಸುತ್ತಾನೆ. ಕೂಡಿ ಬಾಳುವುದರಲ್ಲಿ ಸ್ವರ್ಗಸುಖವಿದೆ ಎಂಬುದನ್ನು ಅರಿಯುತ್ತಾನೆ. ಇಲ್ಲಿ ಏಕತೆ ಹಾಗೂ ಹಿರಿಯರನ್ನು ಗೌರವಿಸುವ ಮೌಲ್ಯಗಳನ್ನು ಗುರುತಿಸಬಹುದು.

ಸಮಾಜ ಕೇಂದ್ರಿತ ಮೌಲ್ಯಗಳು

ಮಕ್ಕಳ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ಸಮಾಜದ ಒಳಿತಿಗೆ ಪೂರಕವಾಗಿದ್ದರೆ ಅದನ್ನು ಸಮಾಜ ಕೇಂದ್ರಿತ ಮೌಲ್ಯವೆನ್ನಬಹುದು. ರಾಂ ಎಲ್ಲಂಗಳ ಅವರ ‘ಬಹುಮಾನ’, ಆರ್. ವಿ. ಭಂಡಾರಿಯವರ ‘ಪ್ರೀತಿಯ ಕಾಳು’, ‘ಒಂದೇ ಬಣ್ಣದ ಹಕ್ಕಿಗಳು’, ‘ಬೆಳಕು ಹಂಚಿದ ಬಾಲಕ’, ಮೂರ್ತಿ ದೇರಾಜೆ ಅವರ ‘ಕಪ್ಪು ಕಾಗೆಯ ಹಾಡು’, ರಾಂ ಎಲ್ಲಂಗಳ ಅವರ ‘ಬಹುಮಾನ’, ಪ್ಲಾಸ್ಟಿಕೋಪಾಖ್ಯಾನ’, ಮೊದಲಾದ ನಾಟಕಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಧಾರ್ಮಿಕ ಕೇಂದ್ರಿತ ಮೌಲ್ಯಗಳು

ಮಕ್ಕಳ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ಧರ್ಮಜಾಗೃತಿಗೆ ಪೂರಕವಾಗಿದ್ದರೆ ಅದನ್ನು ಧಾರ್ಮಿಕ ಕೇಂದ್ರಿತ ಮೌಲ್ಯವೆನ್ನಬಹುದು. ರಾಂ ಎಲ್ಲಂಗಳ ಅವರ ‘ದೇವರಿಗಿಟ್ಟ ಹಣ್ಣು’, ರಾ.ಶಿ. ವಾಡೇದ ಅವರ ‘ದೇವರು ಕೊಟ್ಟ ವರ’ ಮೊದಲಾದ ನಾಟಕಗಳಲ್ಲಿ ಧಾರ್ಮಿಕ ಮೌಲ್ಯಗಳನ್ನು ಗುರುತಿಸಲಾಗಿದೆ.

ನೈತಿಕ ಮೌಲ್ಯಗಳು

ಮಕ್ಕಳ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಪ್ರಧಾನ ಮೌಲ್ಯವು ನೈತಿಕ ಜಾಗೃತಿಗೆ ಪೂರಕವಾಗಿದ್ದರೆ ಅದನ್ನು ನೈತಿಕ ಮೌಲ್ಯವೆನ್ನಬಹುದು. ರಾ.ಶಿ. ವಾಡೇದ ಅವರ ‘ಮಾಯದ ಕುದುರೆ’, ‘ದೇವರು ಕೊಟ್ಟ ವರ’, ಎಚ್. ಕೆ. ರಾಮನಾಥ್ ಅವರ ‘ಕಿನ್ನರಿಯ ಶಾಪ’, ‘ನಾನು

ಮೊದಲು ತಾನು ಮೊದಲು' ಮೊದಲಾದ ನಾಟಕಗಳಲ್ಲಿ ನೈತಿಕ ಮೌಲ್ಯಗಳನ್ನು ಗುರುತಿಸಲಾಗಿದ್ದು ಇವು ಮಕ್ಕಳಲ್ಲಿ ನೈತಿಕ ಪ್ರಜ್ಞೆಯನ್ನು ಬೆಳೆಸಲು ಸಹಕಾರಿಯಾಗಿವೆ.

ಆಧುನಿಕ ಮಕ್ಕಳ ನಾಟಕಗಳಲ್ಲಾದ ಪ್ರಮುಖ ಬದಲಾವಣೆಗಳನ್ನು ಗುರುತಿಸಲಾಗಿದೆ.

ಅಧ್ಯಾಯ ೬

ಮಕ್ಕಳ ಕಾದಂಬರಿ ಸಾಹಿತ್ಯ: ಮೌಲ್ಯಗಳ ವಿವೇಚನೆ

ಆರನೇ ಅಧ್ಯಾಯದಲ್ಲಿ ಮಕ್ಕಳ ಕಾದಂಬರಿ ಸಾಹಿತ್ಯದಲ್ಲಿ ಮೌಲ್ಯಗಳ ವಿವೇಚನೆಯನ್ನು ಮಾಡಲಾಗಿದೆ. ಕನ್ನಡದ ಮಕ್ಕಳ ಸಾಹಿತ್ಯದ ಪ್ರಮುಖ ಕಾದಂಬರಿಕಾರರ ಸಂಕ್ಷಿಪ್ತ ಪರಿಚಯದೊಂದಿಗೆ ಪ್ರಾತಿನಿಧಿಕ ಮಕ್ಕಳ ಕಾದಂಬರಿಗಳ ಮೌಲ್ಯವಿವೇಚನೆಯನ್ನು ಮಾಡಲಾಗಿದೆ.

೬.೧ ಪ್ರಮುಖ ಕಾದಂಬರಿಗಾರರು

ಕನ್ನಡದ ಶ್ರೇಷ್ಠ ಸಾಹಿತಿ ನಾ.ಡಿಸೋಜ, ಆನಂದ ಪಾಟೀಲ, ಹ.ಸ. ಬ್ಯಾಕೋಡ, ಡಾ. ಆರ್. ವಿ. ಭಂಡಾರಿ ಬಸು ಬೇವಿನಗಿಡದ, ಶಾಂತರಾಮ ಸೋಮಯಾಜಿ, ಹುಣಸೂರು ಮಾದುಪ್ರಸಾದ್, ಆರ್. ಬಸವರಾಜು, ಜಂಬೂನಾಥ ಕಾಂಚ್ಯಾಣಿ ಮೊದಲಾದ ಅನೇಕರು ಕನ್ನಡದಲ್ಲಿ ಮಕ್ಕಳಿಗಾಗಿ ಕಾದಂಬರಿಗಳನ್ನು ರಚಿಸಿದ್ದಾರೆ.

೬.೨ ಕಾದಂಬರಿಗಳಲ್ಲಿ ಮೌಲ್ಯಗಳ ಪ್ರತಿಪಾದನೆ

ದೀರ್ಘ ಕಥನವಾದ ಕಾದಂಬರಿಯು ಇಂದು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಾಗಿ ರಚನೆಯಾಗುತ್ತಿದೆ. ಕನ್ನಡದ ಪ್ರಮುಖ ಮಕ್ಕಳ ಕಾದಂಬರಿಗಳಲ್ಲಿ ಪ್ರತಿಪಾದಿತವಾದ ಮೌಲ್ಯಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಮಕ್ಕಳ ಕಾದಂಬರಿಗಳಲ್ಲಿ ಶಿಶು ಕೇಂದ್ರಿತ ಮೌಲ್ಯಗಳು

ಮಕ್ಕಳ ಕಾದಂಬರಿಗಳಲ್ಲಿ ಪ್ರಧಾನವಾಗಿ ಪ್ರತಿಪಾದಿತವಾಗಿರುವ ಮೌಲ್ಯಗಳು ವೈಯುಕ್ತಿಕವಾಗಿ ಮಕ್ಕಳ ಒಳಿತಿಗೆ ಪೂರಕವಾಗಿದ್ದಾಗ ಅದನ್ನು ಶಿಶುಕೇಂದ್ರಿತ ಮೌಲ್ಯಗಳೆಂದು ಗುರುತಿಸುತ್ತೇವೆ. ನಾ.ಡಿಸೋಜರ 'ಆನೆ ಬಂತೊಂದಾನೆ', 'ಶಾಲೆಗೆ ಹೋಗದ ಹುಡುಗಿಯರು', 'ವಿನು ಸುನ್ನಿ ಗೆಳೆಯರು', 'ಮೀನುಗಾರ ದೊರೆ', ಆರ್.ಕೆ. ಶಾನುಭೋಗ ಅವರ 'ಅಂಟಾರ್ಕಟಿಕಾ', ಆರ್.ಕೆ. ನಟರಾಜ್ ಅವರ 'ಚಂದ್ರ ಲೋಕಕೆ ಹೋಗೋಣು ಬಾ', ಆರ್. ಬಸವರಾಜ್ ಅವರ 'ಚಿನ್ನದ

ನದಿಯ ದೊರೆ', ಶಾಂತಾರಾಮ ಸೋಮಯಾಜಿ ಅವರ 'ಸುರಭಿ, ಜಾರುಂದೀ' ಭಾಗ ೧, 'ಸುರಭಿ, ಜಾರುಂದೀ ಮತ್ತು ಪೆಲತ್ತರಿ' ಭಾಗ ೨ ಮೊದಲಾದ ಕಾದಂಬರಿಗಳಲ್ಲಿ ಪ್ರಧಾನವಾಗಿ ಶಿಶುಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕಾದಂಬರಿಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳು

ನಾ. ಡಿಸೋಜರ 'ಮುಳುಗಡೆ ಊರಿಗೆ ಬಂದವರು', 'ಹಕ್ಕಿಗೊಂದು ಗೂಡು ಕೊಡಿ', 'ವಿನು ಸುನ್ನಿ ಗೆಳೆಯರು' ಮೊದಲಾದ ಕಾದಂಬರಿಗಳಲ್ಲಿ ಪೋಷಕ ಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕಾದಂಬರಿಗಳಲ್ಲಿ ಸಮಾಜ ಕೇಂದ್ರಿತ ಮೌಲ್ಯಗಳು

ನಾ. ಡಿಸೋಜರ 'ಮುಳುಗಡೆ ಊರಿಗೆ ಬಂದವರು', 'ಹಕ್ಕಿಗೊಂದು ಗೂಡು ಕೊಡಿ', 'ಹಾರುವ ಹಕ್ಕಿಗೆ ಹಸಿರೆಲೆ ತೋರಣ', ಜಂಬುನಾಥ ಕಂಚ್ಯಾಣಿಯವರ 'ಮಿಡಿದ ಕರುಳು', ಬಸು ಬೇವಿನಗಿಡದ ಅವರ 'ನಾಳೆಯ ಸೂರ್ಯ', ಹ.ಸ. ಬ್ಯಾಕೋಡ ಅವರ 'ಕೋಟೆಯಾದವರು', 'ಹಾರದಿರಲಿ ಪ್ರಾಣಪಕ್ಷಿ', 'ಆಪರೇಶನ್ ಆನೆಮಲೆ' ಮೊದಲಾದ ಕಾದಂಬರಿಗಳಲ್ಲಿ ಪ್ರಧಾನವಾಗಿ ಸಮಾಜ ಕೇಂದ್ರಿತ ಮೌಲ್ಯಗಳನ್ನು ಗುರುತಿಸಲಾಗಿದೆ.

ಮಕ್ಕಳ ಕಾದಂಬರಿಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳು

ಮಕ್ಕಳ ಕಾದಂಬರಿಗಳಲ್ಲಿ ಧಾರ್ಮಿಕ ಮೌಲ್ಯಗಳು ಪ್ರಧಾನವಾಗಿ ಕಂಡುಬರುವುದಿಲ್ಲ. ಆದರೆ ಕೆಲವು ಕಾದಂಬರಿಗಳಲ್ಲಿ ಸಾಂದರ್ಭಿಕವಾಗಿ ಧಾರ್ಮಿಕ ಕೇಂದ್ರಿತ ಮೌಲ್ಯಗಳನ್ನು ಗುರುತಿಸಬಹುದು. ಶಾಂತಾರಾಮ ಸೋಮಯಾಜಿ ಅವರ 'ಸುರಭಿ, ಜಾರುಂದೀ' ಭಾಗ ೧, 'ಸುರಭಿ, ಜಾರುಂದೀ ಮತ್ತು ಪೆಲತ್ತರಿ' ಭಾಗ ೨ ಕಾದಂಬರಿಗಳಲ್ಲಿ ಬರುವ ಜಾರುಂದೀ ಭೂತದ ಪಾತ್ರಗಳಲ್ಲಿ ಧಾರ್ಮಿಕ ಕೇಂದ್ರಿತ ಮೌಲ್ಯಗಳನ್ನು ಗುರುತಿಸಬಹುದು.

ಮಕ್ಕಳ ಕಾದಂಬರಿಗಳಲ್ಲಿ ನೈತಿಕ ಮೌಲ್ಯಗಳು

ಮಕ್ಕಳ ಕಾದಂಬರಿಗಳಲ್ಲಿ ನೈತಿಕ ಮೌಲ್ಯಗಳ ಪ್ರತಿಪಾದನೆಯೂ ಕಡಿಮೆ. ಬಸು ಬೇವಿನಗಿಡದ ಅವರ 'ನಾಳೆಯ ಸೂರ್ಯ' ಕಾದಂಬರಿಯಲ್ಲಿ ಬರುವ ಭೀಮಣ್ಣ ಮಾಸ್ತರರ ಪಾತ್ರದಲ್ಲಿ ನೈತಿಕ ಮೌಲ್ಯವನ್ನು ಗುರುತಿಸಬಹುದು.

ಅಧ್ಯಾಯ ೭

ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ಪಲ್ಲಟಗಳು

ಏಳನೇ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ಪಲ್ಲಟಗಳನ್ನು ಗುರುತಿಸಲಾಗಿದೆ. ಮೌಲ್ಯಗಳ ಪಲ್ಲಟಗಳಿಗೆ ಕಾರಣಗಳು ಹಾಗೂ ಮೌಲ್ಯಗಳ ಪಲ್ಲಟಗಳ ಪರಿಣಾಮಗಳ ಬಗೆಗೆ ವಿವೇಚಿಸಲಾಗಿದೆ.

ಸಾಹಿತ್ಯವು ಜನಜೀವನವನ್ನು, ನಮ್ಮ ಸಮಾಜದ ಆಗುಹೋಗುಗಳನ್ನು, ವರ್ತಮಾನದ ತಲ್ಲಣಗಳನ್ನು ಪ್ರತಿನಿಧಿಸುತ್ತದೆ. ಯಾವುದೇ ಭಾಷೆಯಾಗಲೀ, ಸಾಹಿತ್ಯವಾಗಲೀ ವರ್ತಮಾನದ ಅಗತ್ಯಗಳಿಗೆ ಹೆಚ್ಚು ಹೆಚ್ಚು ಸ್ಪಂದಿಸಿದಷ್ಟು ಅದು ಜೀವಂತಿಕೆಯನ್ನು ಪಡೆಯುತ್ತದೆ. ಒಂದು ಸಮಾಜದ ಜನಜೀವನದ ಸ್ವರೂಪವನ್ನು ಆರ್ಥಿಕ–ರಾಜಕೀಯ ಕಾರಣಗಳು ಪ್ರಭಾವಿಸಿರುವುದನ್ನು ಸಾಹಿತ್ಯದಲ್ಲಿಯೂ ಗುರುತಿಸಬಹುದು. .

೭.೧ ೧೯೯೦ರ ಪೂರ್ವದಲ್ಲಿ ಮಕ್ಕಳ ಸಾಹಿತ್ಯ

೧೭ನೇ ಶತಮಾನದ ಆರಂಭದಲ್ಲೇ ಮಿಶನರಿಗಿಂದ ಶಿಕ್ಷಣ ಆರಂಭವಾದರೂ ೧೯ನೇ ಶತಮಾನದವರೆಗೂ ಕನ್ನಡದಲ್ಲಿ ಮಕ್ಕಳ ಪದ್ಯಗಳು ಕಾಣಸಿಗುವುದಿಲ್ಲ. ೧೮೧೦ರಲ್ಲಿ ಧಾರವಾಡ ವಿಭಾಗದ ಅಸಿಸ್ಟೆಂಟ್ ಕಲೆಕ್ಟರ್ ಆಗಿದ್ದ ವಾಲ್ಟರೆ ಎಲಿಯಟ್ ಮಾಡಿದ ಈಸೋಪನ ಕತೆಗಳ ಮುದ್ರಣ ಮೊದಲನೆಯದು ಎನ್ನುವ ವಾಡಿಕೆಯಿದೆ. (ಡಾ. ಆನಂದ ಪಾಟೀಲ, (ಲೇ.) ಮಕ್ಕಳ ಬರವಣಿಗೆಯ ಉತ್ಕರ್ಷದ ಕಾಲ, ಡಾ. ಬಸು ಬೇವಿನಗಿಡದ (ಸಂ.) ೨೦೧೫, ಪುಟ ೨೫)

ಶಾಲಾ ವ್ಯವಸ್ಥೆ ಆರಂಭವಾದಾಗಿನಿಂದ ಶಿಕ್ಷಕರು ಮಕ್ಕಳಿಗಾಗಿ ಕೃತಿರಚನೆ ಮಾಡತೊಡಗಿದರು. ಕನ್ನಡದ ಆರಂಭದ ಹೆಚ್ಚಿನ ಸೃಜನಶೀಲ ಮಕ್ಕಳ ಸಾಹಿತ್ಯವು ಶಿಕ್ಷಕರಿಂದಲೇ ರಚಿಸಲ್ಪಟ್ಟವು. ಮಕ್ಕಳ ಸಾಹಿತ್ಯದ ಆರಂಭದ ಕಾಲದಲ್ಲಿ ಶಾಲಾ ಪಠ್ಯಪುಸ್ತಕಗಳಿಗಾಗಿ ಸಿದ್ಧವಾದವುಗಳೇ ಅಧಿಕವಾದವು. ಮಕ್ಕಳ ಜೊತೆ ಸದಾ ಬೆರೆಯುತ್ತಿರುವ ಸೃಜನಶೀಲ ಶಿಕ್ಷಕರು ತಮ್ಮ ಬೋಧನೆಯೊಂದಿಗೆ ಮಕ್ಕಳಲ್ಲಿ ಉದಾತ್ತ ಚಿಂತನೆಗಳನ್ನು ಬೆಳೆಸಲು ಇದು ಅಗತ್ಯವೂ ಸಹಕಾರಿಯೂ ಆಯಿತು.

೭.೨ ೧೯೯೦ ರ ನಂತರದ ಸಾಹಿತ್ಯದಲ್ಲಿ ಮೌಲ್ಯಗಳ ಪಲ್ಲಟಗಳು

ಮಕ್ಕಳ ಸಾಹಿತ್ಯದಲ್ಲಿ ಮೌಲ್ಯಗಳ ಪಲ್ಲಟಗಳನ್ನು ಗುರುತಿಸಬಹುದು. ಉದಾಹರಣೆಗೆ ಈ ಹಿಂದೆ ಪ್ರಾಥಮಿಕ ಶಾಲಾ ಪಠ್ಯದಲ್ಲಿದ್ದ ಗಿರಿರಾಜ ಹೊಸಮನಿ ಹಾಗೂ ಭಾಸ್ಕರ ನೆಲ್ಯಾಡಿಯವರ ಕವನಗಳನ್ನು ಗಮನಿಸಬಹುದು.

ಗಿರಿರಾಜ ಹೊಸಮನಿಯವರ 'ಆಮೆ' ಕಥನ ಕವನದ ವಸ್ತುವನ್ನು ಆಧರಿಸಿ, ಭಿನ್ನ ರೀತಿಯಲ್ಲಿ ಯೋಚಿಸಿ ಚಿತ್ರಕಲಾವಿದರಾದ ಭಾಸ್ಕರ ನೆಲ್ಯಾಡಿಯವರು 'ಜಾಣ ಆಮೆ' ಕಥನ ಕವನ ಬರೆದಿದ್ದು; ಆ ಕವನವೂ ಪ್ರಾಥಮಿಕ ಶಾಲಾ ಪಠ್ಯದಲ್ಲಿದೆ. (೭ನೇ ತರಗತಿ ದ್ವಿತೀಯ ಭಾಷೆ ಕನ್ನಡ) ಗಿರಿರಾಜ ಹೊಸಮನಿಯವರ 'ಆಮೆ' ಕವನದಲ್ಲಿ ಆಮೆಯು ಸತ್ತು ಹೋದರೆ; ಭಾಸ್ಕರ ನೆಲ್ಯಾಡಿಯವರ 'ಜಾಣ ಆಮೆ' ಕವನದಲ್ಲಿ ಆಗಸದಲ್ಲಿ ಹಂಸಗಳೊಡನೆ ಹಾರುವ ಆಮೆಯನ್ನು ಕಂಡ ಪಡ್ಡೆ ಹುಡುಗರು ತಮಾಶೆ ಮಾಡಿದಾಗ ಅದು ಕೋಲನ್ನು ಕೈಯಲ್ಲಿ ಕಚ್ಚಿ ಹಿಡಿದು ಅವರನ್ನು ಬೈಯುತ್ತದೆ. ಇಲ್ಲಿ ಆಮೆಯ ಬುದ್ಧಿವಂತಿಕೆಯನ್ನು ಗುರುತಿಸಬಹುದು.

೭.೩ ಮೌಲ್ಯಗಳ ಪಲ್ಲಟಗಳಿಗೆ ಕಾರಣಗಳು

೧೯೯೦ ರ ನಂತರ ಬಂದ ಜಾಗತೀಕರಣವು ಇಂದು ಎಲ್ಲೆಡೆ ಲಗ್ಗೆಯಿಟ್ಟು ಜಗತ್ತನ್ನೇ ಆವರಿಸಿದೆ. ಅದು ನಮ್ಮ ಸಮಾಜ, ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತಿದೆ. ಅದರ ಪ್ರಭಾವವನ್ನು ಎಲ್ಲ ಬಗೆಯ ಸಾಹಿತ್ಯದಲ್ಲೂ ಗುರುತಿಸಬಹುದು. ಇದಕ್ಕೆ ಮಕ್ಕಳ ಸಾಹಿತ್ಯವೂ ಹೊರತಲ್ಲ.

ಜಾಗತೀಕರಣದ ಬಿಗಿಯಾದ ಹಿಡಿತವು ಶಿಕ್ಷಣ ಹಾಗೂ ಬೋಧನಾ ಮಾಧ್ಯಮದ ಮೇಲೆ ಪ್ರಭಾವ ಬೀರಿದೆ. ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವುದು, ಇಂಗ್ಲಿಷ್ ಮಾಧ್ಯಮಕ್ಕೇ ಪ್ರಾಧಾನ್ಯವನ್ನು ನೀಡುವುದು ಸರ್ವವಿದಿತ. ಇದರಿಂದಾಗಿ ಜನರ ಧೋರಣೆಗಳಲ್ಲಿ, ಚಿಂತನೆಗಳಲ್ಲಿ ಬದಲಾವಣೆಗಳು ಉಂಟಾದವು.

ಕೈಗಾರಿಕೀಕರಣ, ಆಧುನೀಕರಣ, ನಗರೀಕರಣಗಳಿಂದಾಗಿ ಜನರ ಬದುಕಿನ ಶೈಲಿಯೂ ಬದಲಾಯಿತು. ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆದು ಔದ್ಯೋಗಿಕವಾಗಿ ಹೆಚ್ಚು ದುಡಿಯಲು ಪ್ರಾರಂಭಿಸಿದರು. ವಿಭಕ್ತ ಕುಟುಂಬ ಹಾಗೂ ಕುಟುಂಬ ಯೋಜನೆಯ ಪರಿಣಾಮ ಮಕ್ಕಳಿಗೆ ಮನೆಯಲ್ಲಿ ಅನೌಪಚಾರಿಕವಾಗಿ ದೊರೆಯುತ್ತಿದ್ದ ಮೌಲ್ಯಗಳ ಪಾತ್ರವೂ ಕಡಿಮೆಯಾಯಿತು.

ಮನೆಯಲ್ಲಿ ಒಂದೇ ಮಗುವಿದ್ದಾಗ ಆ ಮಗುವನ್ನು ಹೆತ್ತವರು ವಿಶೇಷ ಕಾಳಜಿಯಿಂದ, ಕೆಲವೊಮ್ಮೆ ಅತಿಯಾದ ಮುದ್ದಿನಿಂದ ಸಾಕತೊಡಗಿದರು. ಮಕ್ಕಳಿಗೆ ಬೇಕುಬೇಕಾದ್ದೆಲ್ಲಾ ಕೊಡಿಸಿ ಮಕ್ಕಳು ಕೊಳ್ಳುಬಾಕ ಸಂಸ್ಕೃತಿಯ ದಾಸರಾಗುವಂತೆ ಮಾಡಿದರು. ಮಕ್ಕಳಲ್ಲೂ ಹಿರಿಯರಲ್ಲೂ ಉಳಿತಾಯದ ಮೌಲ್ಯ ಕಡಿಮೆಯಾಗಿ ಭೋಗ ಸಂಸ್ಕೃತಿಯು ಆದ್ಯತೆಯ ಮೌಲ್ಯವಾಗತೊಡಗಿತು. ಇದರಿಂದಾಗಿ ಆ ಮಗುವಿನಲ್ಲಿ ಹೊಂದಾಣಿಕೆಯ ಗುಣವೂ ಕಡಿಮೆಯಾಗಲು ಕಾರಣವಾಯಿತು. ಅದು ಮಕ್ಕಳಲ್ಲಿ ಮೌಲ್ಯಗಳ ಕುಸಿತಕ್ಕೂ ಕಾರಣವಾಯಿತು.

೭.೪ ಮೌಲ್ಯಗಳ ಪಲ್ಲಟಗಳ ಪರಿಣಾಮಗಳು

ಮೌಲ್ಯಗಳ ಪಲ್ಲಟಗಳ ಪರಿಣಾಮಗಳಿಂದಾಗಿ ಒಂದು ಕಾಲದ ಮೌಲ್ಯ ವ್ಯವಸ್ಥೆಯು ಪುನರ್ ಸಂಘಟಿತವಾಗತೊಡಗಿತು. ಒಂದು ಕಾಲದ ಮೌಲ್ಯವು ಇನ್ನೊಂದು ಕಾಲಘಟ್ಟಕ್ಕೆ ಕನೂನು ಬಾಹಿರವಾಗತೊಡಗಿತು. ಉದಾಹರಣೆಗೆ 'ಬೇಟೆ' ಒಂದು ಕಾಲದ ಮೌಲ್ಯವಾಗಿದ್ದು ಹಿಂದಿನ ಸಾಹಿತ್ಯ ಕೃತಿಗಳಲ್ಲಿ ಬೇಟೆಯ ವರ್ಣನೆಗಳನ್ನು ಕಾಣಬಹುದು. ಆದರೆ 'ಬೇಟೆ' ಇಂದು ಕಾನೂನು ಬಾಹಿರವಾಗಿದ್ದು ಈ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ಇಂದಿನ ಕೃತಿಗಳಲ್ಲಿ ಪ್ರಾಣಿ ಪಕ್ಷಿಗಳ ಸಂರಕ್ಷಣೆಗೆ ಆದ್ಯತೆ ನೀಡುತ್ತಿರುವುದನ್ನು ಗುರುತಿಸಬಹುದು. ಒಂದು ಕಾಲದಲ್ಲಿ ಕಡಿಮೆ ಪ್ರಾಮುಖ್ಯವನ್ನು ಪಡೆದ ವಿಚಾರವು ಇಂದು ಹೆಚ್ಚು ಆದ್ಯತೆಯನ್ನು ಪಡೆಯುತ್ತಿದೆ. ಉದಾಹರಣೆಗೆ ಇಂದು ಪರಿಸರ ನಾಶ ಹೆಚ್ಚಿರುವುದರಿಂದ ಪರಿಸರ ಸಂರಕ್ಷಣೆಯ ಅಗತ್ಯವೂ ಹೆಚ್ಚಿದೆ. ಇಂದಿನ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಪರಿಸರ ಸಂರಕ್ಷಣೆಯ ಅಗತ್ಯದ ಪ್ರತಿಪಾದನೆಯನ್ನು ಧಾರಾಳವಾಗಿ ಕಾಣಬಹುದು.

ಅಧ್ಯಾಯ ೮

ಅಧ್ಯಯನದ ಫಲಶ್ರುತಿಗಳು

ಎಂಟನೇ ಅಧ್ಯಾಯದಲ್ಲಿ ಈ ಅಧ್ಯಯನದಿಂದ ವ್ಯಕ್ತವಾದ ಅಧ್ಯಯನದ ಫಲಿತಾಂಶವನ್ನು ದಾಖಲಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ರಲ್ಲಿ ಪ್ರತಿಪಾದಿತವಾದ ಮೌಲ್ಯಗಳ ಹಿನ್ನೆಲೆಯಲ್ಲಿ ಹಾಗೂ ೮೪ ಮೂಲ ಮೌಲ್ಯಗಳು ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಹೇಗೆ ಪ್ರತಿಪಾದಿತವಾಗಿವೆ ಎಂಬುದನ್ನು ದಾಖಲಿಸಾಗಿದೆ. ಮುಂದಿನ ಅಧ್ಯಯನದ ಸಾಧ್ಯತೆಗಳ ಬಗೆಗಗಿನ ವಿವರಗಳನ್ನೂ ದಾಖಲಿಸಲಾಗಿದೆ. ಅನುಬಂಧದಲ್ಲಿ ಅಧ್ಯಯನಕ್ಕೆ ಬಳಸಿಕೊಂಡ ಮೂಲ ಪಠ್ಯಗಳ ವಿವರ ಹಾಗೂ ಪರಾಮರ್ಶನದ ವಿವರಗಳನ್ನು ದಾಖಲಿಸಲಾಗಿದೆ.

೮.೧ ಅಧ್ಯಯನದ ಫಲಿತಗಳು

ಇಂದು ಕನ್ನಡದಲ್ಲಿ ಮಕ್ಕಳ ಸಾಹಿತ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕೃತಿ ರಚನೆಯಾಗುತ್ತಿವೆ. ಇವುಗಳು ಕೇವಲ ಸಂಖ್ಯೆಯ ನೆಲೆಯಲ್ಲಿ ಮಾತ್ರವಲ್ಲ; ಗುಣಾತ್ಮಕವಾಗಿಯೂ ಇವೆಯೆಂಬುದು ಗಮನೀಯ. ಕಾಲ ಬದಲಾದಂತೆ ಜನರ ಆಚಾರ, ವಿಚಾರ, ಜನಜೀವನ ಕ್ರಮ, ಉಡುಗೆ–ತೊಡುಗೆ ಸಂಸ್ಕೃತಿ ಹೀಗೆ ಎಲ್ಲದರಲ್ಲೂ ಬದಲಾವಣೆಗಳಾಗುವುದನ್ನು ಗುರುತಿಸಬಹುದು. ಈ

ಚಲನಶೀಲತೆ ಜನಜೀವನ, ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರುವುದನ್ನು ಇಂದಿನ ಮಕ್ಕಳ ಸಾಹಿತ್ಯದಲ್ಲಿಯೂ ಗುರುತಿಸಬಹುದು.

೧೯೯೦ ರಿಂದ ೨೦೧೫ ರ ಕಾಲಘಟ್ಟದ ಕನ್ನಡದ ಪ್ರಮುಖ ಮಕ್ಕಳ ಸಾಹಿತ್ಯವನ್ನು ಅವುಗಳಲ್ಲಿ ಪ್ರತಿಪಾದಿತವಾದ ಮೌಲ್ಯಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡು ಅವಲೋಕಿಸಿ ಈ ಕೆಳಗಿನ ಪ್ರಮುಖ ಅಂಶಗಳನ್ನು ಗುರುತಿಸಬಹುದು.

- ಮಕ್ಕಳ ಸಾಹಿತ್ಯವೆಂದರೆ ಕೇವಲ ಮಕ್ಕಳ ಮನಸ್ಸನ್ನು ರಂಜಿಸುವುದಲ್ಲ. ಅದರಲ್ಲಿ ಮಕ್ಕಳಿಗೆ ಆಪ್ತವಾದ ಭಾಷಾ ಬಳಕೆಯೊಂದಿಗೆ ಆಳವಾದ ಮೌಲ್ಯಚಿಂತನೆಗಳಿರುವುದನ್ನು ನಿಚ್ಚಳವಾಗಿ ಗುರುತಿಸಬಹುದು.

- ಮಕ್ಕಳಿಗೆ ಯಾವುದೇ ವಿಚಾರವನ್ನು ದೊಡ್ಡವರಿಗೆ ಹೇಳಿದಂತೆ ಹೇಳಕೂಡದು. ಮಕ್ಕಳ ವಯೋಮಾನ, ಮನಸ್ಥಿತಿ ಅರಿತು ವ್ಯವಹರಿಸಿದಾಗ ಮಕ್ಕಳ ಮನಸ್ಸನ್ನು ಗೆಲ್ಲಲು ಸಾಧ್ಯ. ಮಕ್ಕಳ ಸಾಹಿತ್ಯ ಕೃತಿಯೊಂದು ಮಕ್ಕಳಿಗೆ ಆಪ್ತವಾಗಬೇಕಾದರೆ, ಸಾರ್ವತ್ರಿಕವಾಗಿ ಸ್ವೀಕಾರಾರ್ಹವಾಗಬೇಕಾದರೆ ಅದು ಪ್ರಭು ಸಂಹಿತೆಯಾಗಬಾರದು, ಮಿತ್ರ ಸಂಹಿತೆಯಾಗಬೇಕು. ಆಗ ಮಾತ್ರ ಆ ಕೃತಿಯು ಯಶಸ್ಸಿನ ಶಿಖರವನ್ನೇರಲು ಸಾಧ್ಯ. ಅಧಿಕಾರವಾಣಿಯಿಂದ ಮಕ್ಕಳನ್ನು ನಿಯಂತ್ರಿಸಬಹುದು, ಅವರ ಭಾವನೆಗಳನ್ನು ತಾತ್ಕಾಲಿಕವಾಗಿ ಅದುಮಿಡಬಹುದು. ಆದರೆ ಅವರ ಮನಸ್ಸನ್ನು ಗೆಲ್ಲಲು ಸಾಧ್ಯವಿಲ್ಲ. ಮಕ್ಕಳ ಮನಸ್ಸನ್ನು ಪ್ರೀತಿಯಿಂದ ಗೆಲ್ಲಬೇಕಾದರೆ ಮಕ್ಕಳಿಗೆ ಆಪ್ತವಾದ ಭಾಷಾ ಶೈಲಿ, ಪದಪುಂಜಗಳ ಬಳಕೆಯಾಗಬೇಕು. ಆಪ್ತ ಬರವಣಿಗೆಯಿಂದ ಮಕ್ಕಳಲ್ಲಿ ಧನಾತ್ಮಕವಾದ ಮೌಲ್ಯಚಿಂತನೆಗಳನ್ನು ಸದ್ದಿಲ್ಲದೆ ಬೆಳೆಸಲು ಸಾಧ್ಯ. ಕನ್ನಡದ ಹಲವಾರು ಮಕ್ಕಳ ಸಾಹಿತ್ಯ ಕೃತಿಗಳು ಈ ಕಾರ್ಯವನ್ನು ಸಮರ್ಥವಾಗಿ ಮಾಡುತ್ತಿವೆ ಎಂಬುದನ್ನು ಗುರುತಿಸಬಹುದು. ಈ ನಿಟ್ಟಿನಲ್ಲಿ ಕನ್ನಡದ ಮಕ್ಕಳ ಸಾಹಿತಿಗಳು ಸಾಹಿತ್ಯ ಕೃಷಿ ಮಾಡಿತ್ತಿದ್ದಾರೆ.

- ಒಂದು ಕೃತಿ ಎಷ್ಟೇ ಉತ್ಕೃಷ್ಟವಾಗಿದ್ದರೂ ಅದನ್ನು ಕೊಂಡು ಓದುವ ವರ್ಗ ಬೇಕು. ಇಲ್ಲವಾದಲ್ಲಿ ಅದು "ಕಟ್ಟಿಯುಮೇನೊ ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ?" ಎಂಬ ಕವಿಚಕ್ರವರ್ತಿ ಜನ್ನನ ಮಾತನ್ನು ನೆನಪಿಸುತ್ತದೆ. ಸೃಜನಶೀಲ ಕೃತಿಯೊಂದು ಪರಿಪೂರ್ಣವಾಗಬೇಕಾದರೆ ಅದಕ್ಕೆ ಸಹೃದಯ ಓದುಗರ ಅಗತ್ಯವನ್ನು ಈ ಮಾತು ಪ್ರತಿನಿಧಿಸುತ್ತದೆ. ಇಂದು ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿದೆ. ಆಂಗ್ಲಭಾಷೆಯ ಮೋಹಪಾಶಕ್ಕೆ ಸಿಲುಕಿ ಕನ್ನಡದ ಕಂದಮ್ಮಗಳು ಬಡವಾಗುತ್ತಿವೆ ಎಂಬ ಮಾತು ಎಲ್ಲೆಡೆ ಕೇಳೀಬರುತ್ತಿರುವ ಈ ಸಂದರ್ಭದಲ್ಲೂ ಕನ್ನಡದ ಮಕ್ಕಳ ಸಾಹಿತ್ಯ ಕೃತಿಗಳನ್ನು ಕೊಂಡು ಓದುವ

ಪ್ರವೃತ್ತಿಯು ಕನ್ನಡ ಸಾಹಿತ್ಯದ ಬೆಳವಣಿಗೆ ಹಾಗೂ ಭವಿಷ್ಯದ ದೃಷ್ಟಿಯಿಂದ ಹೊಸ ಆಶಾಕಿರಣವನ್ನು ಮೂಡಿಸಿದೆ. ಜಾಗತೀಕರಣ, ನಗರೀಕರಣ ಮತ್ತು ಆಧುನೀಕರಣದ ಭರಾಟೆಯಲ್ಲಿ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಸಿಕ್ಕ ಇಂದಿನ ಬದುಕಿನಲ್ಲಿ ಮಕ್ಕಳಲ್ಲಿ ಮೌಲ್ಯಚಿಂತನೆಯನ್ನು ಬೆಳೆಸುವಲ್ಲಿ ಮಕ್ಕಳ ಸಾಹಿತ್ಯ ಕೃತಿಗಳು ಬಹುಮುಖ್ಯ ಪಾತ್ರವನ್ನು ವಹಿಸಿರುವುದನ್ನು ಅಲ್ಲಗಳೆಯುವಂತಿಲ್ಲ.

- ಮಕ್ಕಳ ಕಥಾ ಸಾಹಿತ್ಯ ಕೃತಿಗಳನ್ನು ಗಮನಿಸಿದಾಗ ಅವು ಕೇವಲ ಮಕ್ಕಳಿಗೆ ರಂಜನೀಯವಾದ ಕಥೆಗಳನ್ನು ಹೇಳುತ್ತಿಲ್ಲ. ಮಕ್ಕಳ ಮನರಂಜಿಸುವುದರೊಂದಿಗೆ ಮಕ್ಕಳ ಜೀವನಕ್ಕೆ ಅಗತ್ಯವಾದ, ಅವರ ವ್ಯಕ್ತಿತ್ವವನ್ನು ರೂಪಿಸಬಲ್ಲ ಮೌಲ್ಯಗಳನ್ನು ಪ್ರತಿಪಾದಿಸುತ್ತಿವೆ. ಮಕ್ಕಳ ಅರಿವಿಗೆ ಬಾರದ ರೀತಿಯಲ್ಲಿ ಅವರ ಮನಸ್ಸಿನ ಓರೆಕೋರೆಗಳನ್ನು ತಿದ್ದಿ ತೀಡಿ ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಕ್ಕಳ ಕಥಾ ಸಾಹಿತ್ಯದ ಪಾತ್ರ ಹಿರಿದಾಗಿದೆ.
- ಹೊಸ ಬಗೆಯ ಮಕ್ಕಳ ಕವನಗಳು ಹೆಚ್ಚು ರಚನೆಯಾಗುತ್ತಿವೆ. ಆನಂದ ಪಾಟೀಲ, ಡಾ. ಕೆ.ವಿ. ತಿರುಮಲೇಶ್, ಶ್ರೀನಿವಾಸ ಉಡುಪ, ರಾಧೇಶ್ ತೋಳ್ಪಾಡಿ, ನಿರ್ಮಲಾ ಸುರತ್ಕಲ್ ಮೊದಲಾದವರ ಕವಿತೆಗಳಲ್ಲಿ ಹೊಸತನವನ್ನು ಗುರುತಿಸಬಹುದು.
- ಗೋಪಾಲಕೃಷ್ಣ ಮಧುರಕಾನನರ 'ಮಕ್ಕಳ ರಾಮಾಯಣ ಚೌಪದಿ ಮಹಾಕಾವ್ಯ' ಮಕ್ಕಳ ಸಾಹಿತ್ಯದ ಹಿನ್ನೆಲೆಯಲ್ಲಿ ಒಂದು ವಿಶಿಷ್ಟ ಪ್ರಯೋಗವಾಗಿದೆ.

೮.೨ ಮುಂದಿನ ಅಧ್ಯಯನದ ಸಾಧ್ಯತೆಗಳು

ಮಕ್ಕಳ ಸಾಹಿತ್ಯವನ್ನು ಗಮನಿಸಿದಾಗ ಈ ಕೆಳಗಿನ ವಿಚಾರಗಳಲ್ಲಿ ಮುಂದೆ ಸಂಶೋಧನೆಯನ್ನು ಕೈಗೊಳ್ಳಲು ವಿಪುಲವಾದ ಅವಕಾಶಗಳಿವೆ ಎನ್ನಬಹುದು.

- ಕನ್ನಡದ ಮಕ್ಕಳ ಸಾಹಿತ್ಯ ಹಾಗೂ ಇತರ ಭಾಷೆಗಳ ಮಕ್ಕಳ ಸಾಹಿತ್ಯದ ತೌಲನಿಕವಾದ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯ ಅಧ್ಯಯನವನ್ನು ಕೈಗೊಳ್ಳಬಹುದು.
- ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವಾರು ವ್ಯಕ್ತಿಕೇಂದ್ರಿತ ಅಧ್ಯಯನಗಳು ನಡೆದಿವೆಯಾದರೂ ಇನ್ನಷ್ಟು ಅಧ್ಯಯನಗಳನ್ನು ಈ ಹಿನ್ನೆಲೆಯಲ್ಲಿ ಕೈಗೊಳ್ಳಲು ಸಾಧ್ಯ.
- ಇತ್ತೀಚೆಗೆ ಮಕ್ಕಳ ಕಾದಂಬರಿಗಳು ಹೆಚ್ಚು ಹೆಚ್ಚು ಪ್ರಕಟವಾಗುತ್ತಿದ್ದು ಮಕ್ಕಳ ಕಾದಂಬರಿ ಸಾಹಿತ್ಯದ ಬಗೆಗೆ ಪ್ರತ್ಯೇಕವಾದ ಅಧ್ಯಯನವನ್ನು ಕೈಗೊಳ್ಳಬಹುದು.

- ಮಕ್ಕಳೇ ರಚಿಸಿದ ಸಾಕಷ್ಟು ಕೃತಿಗಳೂ ಪ್ರಕಟವಾಗಿದ್ದು ಅವುಗಳ ಬಗೆಗೆ ಅಧ್ಯಯನ ಕೈಗೊಳ್ಳಬಹುದು.
- ಪತ್ರಿಕೆಗಳಲ್ಲಿ ಪ್ರಕಟವಾದ ಮಕ್ಕಳ ಸಾಹಿತ್ಯದ ಕುರಿತು ಪ್ರತ್ಯೇಕವಾದ ಅಧ್ಯಯನವನ್ನು ಕೈಗೊಳ್ಳಬಹುದು.
- ಪಠ್ಯಪುಸ್ತಕಗಳಲ್ಲಿ ಮಕ್ಕಳ ಸಾಹಿತ್ಯ– ಪಠ್ಯಪುಸ್ತಕ ರಚನಾ ತತ್ವಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಬಹುದು.
- ಮಕ್ಕಳ ಸಾಹಿತ್ಯದ ಭಾಷೆ, ಶೈಲಿ ಹಾಗೂ ಪ್ರಾದೇಶಿಕತೆ, ಸಾಹಿತ್ಯದ ಮುಖ್ಯವಾಹಿನಿಯ ಪ್ರವೇಶದಲ್ಲಿ ಮಕ್ಕಳ ಸಾಹಿತ್ಯದ ಪ್ರೇರಣೆಯ ಹಿನ್ನೆಲೆಯ ಅಧ್ಯಯನವನ್ನು ಕೈಗೊಳ್ಳಬಹುದು.

ಒಟ್ಟಿನಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರವು ಇಂದು ಗುಣಾತ್ಮಕವಾಗಿಯೂ, ಪರಿಮಾಣಾತ್ಮಕವಾಗಿಯೂ ಬೆಳೆದಿದ್ದು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳಲ್ಲಿ ಸಂಶೋಧನೆ, ಅಧ್ಯಯನದ ಹೊಸ ಸಾಧ್ಯತೆಗಳನ್ನು ತೆರೆದುಕೊಂಡಿದೆ.

ಅನುಬಂಧ

ಆಕರ ಗ್ರಂಥಗಳು

೧. ಮಕ್ಕಳ ಸಾಹಿತ್ಯ ಕೃತಿಗಳ ಪಟ್ಟಿ (ಮೂಲ ಪಠ್ಯ)

ಅಧ್ಯಯನಕ್ಕೆ ಬಳಸಿದ ಮಕ್ಕಳ ಕಥಾ ಸಂಕಲನಗಳು

೧. ಆನಂದ ಪಾಟೀಲ, (೨೦೦೨). ಮೂರು ಮೇಲೊಂದು, ನಿರ್ಮಲ ಪ್ರಕಾಶನ, ತಿಪಟೂರು.

೨. ಕಸ್ತೂರಿ, (೨೦೦೮). ಮಕ್ಕಳಿಗಾಗಿ ಪ್ರಸಿದ್ಧ ನೀತಿ ಕಥೆಗಳು, ಸ್ಟೂಡೆಂಟ್ ಬುಕ್ ಕಂಪೆನಿ, ತುಮಕೂರು.

೩. ಕುಸುಮಾ ಬಿ.ಜಿ.(೨೦೧೫). ಚಿಟ್ಟೆಯ ತೀರ್ಪು, ವಿಕಾಸ ಪ್ರಕಾಶನ, ಬೆಂಗಳೂರು.

೪. ಕಾಂಚ್ಯಾಣಿ ಶರಣಪ್ಪ, (೨೦೦೯). ಅಜ್ಜನ ಅಂದದ ಕಥೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫. ಗಣೇಶಯ್ಯ ಜಿ. ವಿ.(೨೦೧೩). ವಿಚಿತ್ರ ಸತ್ಯಗಳು ಕುತೂಹಲಕರ ಕಥೆಗಳು (ಮೂರನೇ ಮುದ್ರಣ), ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೬. ಗಣೇಶ. ಪಿ. ನಾಡೋರ (೨೦೦೩). ಬೆಳ್ಳಕ್ಕಿ ಮತ್ತು ಬುಲ್‌ಬುಲ್, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೭. ಗಿರೀಶ ಜಕಾಪುರೆ. (೨೦೧೧). ಜುಗ್ನು, ಅಭಿನವ ಪ್ರಕಾಶನ, ಬೆಂಗಳೂರು.

೮. ಗುಂಡೂ ರಾವ್ ಬಿ.(೨೦೦೭). ರೋಚಕ ಕಥೆಗಳು, ಅದಿತಿ ಪ್ರಕಾಶನ, ಬೆಂಗಳೂರು.

೯. ಚಂದ್ರಶೇಖರ ಕಂಬಾರ (೨೦೧೧). ಮರವೇ ಮರ್ಮರವೇ :ಮಕ್ಕಳಿಗಾಗಿ ಮತ್ತೊಮ್ಮೆ ಹೇಳಿದ ಜನಪದ ಕಥೆಗಳು, (ಮೂರನೇ ಮುದ್ರಣ) ಅಂಕಿತ ಪುಸ್ತಕ, ಬೆಂಗಳೂರು

೧೦. ತಮ್ಮಣ್ಣ ಬೀಗಾರ. (೨೦೦೭). ಕಪ್ಪೆಯ ಪಯಣ, ಉದಯ ಪ್ರಕಾಶನ, ಬೆಂಗಳೂರು.

೧೧. ತಮ್ಮಣ್ಣ ಬೀಗಾರ.(೨೦೦೯). ಜಿಂಕೆಮರಿ, ಉದಯ ಪ್ರಕಾಶನ, ಬೆಂಗಳೂರು.

೧೨. ತಮ್ಮಣ್ಣ ಬೀಗಾರ. (೨೦೧೦). ಹಸಿರೂರಿನ ಹುಡುಗ, ಬಂಡಾಯ ಪ್ರಕಾಶನ, ಕೆರೆಕೋಣ, ಹೊನ್ನಾವರ.

೧೩. ತಮ್ಮಣ್ಣ ಬೀಗಾರ. (೨೦೧೪). ಅಮ್ಮನ ಚಿತ್ರ, ಚಿಲಿಪಿಲಿ ಪ್ರಕಾಶನ, ಧಾರವಾಡ.

೧೪. ನವಗಿರಿನಂದ, (೨೦೧೪). ವಿಚಿತ್ರ ಗಿಳಿ, (ಆರನೇ ಮುದ್ರಣ) ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೧೫. ನವಗಿರಿನಂದ. (೨೦೧೧). ಚಂದಮಾಮನ ಮನೆಗೆ, (ಐದನೇ ಮುದ್ರಣ) ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೧೬. ನವಗಿರಿನಂದ. (೨೦೧೩). ರಾಮನ ಸಾಮರ್ಥ್ಯ, (ಆರನೇ ಮುದ್ರಣ) ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೧೭. ನವಗಿರಿನಂದ.(೨೦೧೧). ಮಲ್ಲಿಗೆಯ ಮಳೆ, (ಐದನೇ ಮುದ್ರಣ) ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೧೮. ನಾಗರಾಜ್ ಎಂ.ವಿ. ಮಕ್ಕಳಿಗಾಗಿ ೫೧ ನೀತಿ ಬೋಧಕ ಕಥೆಗಳು, ವಸಂತ ಎಂಟರ್‌ಪ್ರೈಸಸ್, ಬೆಂಗಳೂರು.

೧೯. ನಾಗರಾಜ ಶೆಟ್ಟಿ ಟಿ.ಎಸ್. (೨೦೦೩). ಚಿನ್ನದ ಗುಬ್ಬಿ, ನಿರ್ಮಲ ಪ್ರಕಾಶನ, ತಿಪಟೂರು.

೨೦. ನಾಗರಾಜ ಶೆಟ್ಟಿ ಟಿ.ಎಸ್. (೧೯೯೭). ಕರಡಿ ರಸಾಯನ, ನಿರ್ಮಲ ಪ್ರಕಾಶನ, ತಿಪಟೂರು.

೨೧. ನಾರಾಯಣ ಭಟ್. ಟಿ. ರಾಮಕುಂಜ.(೨೦೧೪). ಮಕ್ಕಳೇ ಕೇಳುವಿರಾ ನನ್ನ ಕಥೆ?, ಮೌಲಿಕಾ ಪ್ರಕಾಶನ, ರಾಮಕುಂಜ.

೨೨. ನಾರಾಯಣ ಭಟ್. ಟಿ. ರಾಮಕುಂಜ.(೨೦೧೩). ಬದುಕು ಬದಲಾಯಿಸಬಲ್ಲ ಮಕ್ಕಳ ಕಥೆಗಳು, ಮೌಲಿಕಾ ಪ್ರಕಾಶನ, ರಾಮಕುಂಜ.

೨೩. ನಾರಾಯಣ ರಾವ್ ಕೃ.(೨೦೦೭). ಗಣಪನ ಸ್ವಾರಸ್ಯ ಕಥೆಗಳು, (ಎರಡನೇ ಮುದ್ರಣ). ನಿರ್ಮಲ ಪ್ರಕಾಶನ, ತಿಪಟೂರು.

೨೪. ನಾರಾಯಣ ರಾವ್ ಕೃ.(೨೦೧೪). ಮಕ್ಕಳಲ್ಲಿ ಧೈರ್ಯ ವೃದ್ಧಿಯಾಗಲು ಸಾಹಸ ಕಥೆಗಳು, ಪ್ರಗತಿ ಪಬ್ಲಿಕೇಶನ್ಸ್, ಬೆಂಗಳೂರು.

೨೫. ನಾರಾಯಣ ರಾವ್ ಕೃ. (೨೦೧೪). ಪಶು ಪಕ್ಷಿಗಳ ಕಥೆಗಳು, ವೆಂಕಟಾದ್ರಿ ಪ್ರಕಾಶನ, ಬೆಂಗಳೂರು.

೨೬. ನಾರಾಯಣ ರಾವ್ ಕೃ. (೨೦೧೧). ಮಕ್ಕಳಿಗಾಗಿ ಮಹಾಪುರುಷರ ಜೀವನದ ಕತೆಗಳು. ವಿದ್ಯಾರ್ಥಿ ಪ್ರಕಾಶನ, ಬೆಂಗಳೂರು.

೨೭. ನಾರಾಯಣೀ ದಾಮೋದರ್. (೨೦೦೯).ಬೆಳಕು ನೀಡುವ ಕಥೆಗಳು. ಅಂಕಿತ ಪುಸ್ತಕ, ಬೆಂಗಳೂರು.

೨೮. ನಾರಾಯಣೀ ದಾಮೋದರ್. (೨೦೦೯). ಒಂದಾನೊಂದು ಕಾಲದಲ್ಲಿ, ಅಂಕಿತ ಪುಸ್ತಕ, ಬೆಂಗಳೂರು.

೨೯. ನೀಲಾವರ ಸುರೇಂದ್ರ ಅಡಿಗ. (೨೦೦೭). ಕಿಟ್ಟಜ್ಜಿ ಮತ್ತು ಹವಿಸ್ಸು ಪಾತ್ರೆ, (ನಾಲ್ಕನೇ ಮುದ್ರಣ). ಸುಭಾಷ್ ಸ್ಟೋರ್ಸ್ ಬುಕ್ ಕಾರ್ನರ್, ಬೆಂಗಳೂರು.

೩೦. ಪರಿಮಳಾ ರಾವ್ ಜಿ.ಆರ್. (೨೦೦೯). ಕೋಗಿಲೆಯ ಸ್ವಯಂವರ ಮತ್ತು ಮಕ್ಕಳ ಇತರ ಕತೆಗಳು, ವಸಂತ ಎಂಟರ್ ಪ್ರೈಸಸ್, ಬೆಂಗಳೂರು.

೩೧. ಪಳಕಳ ಸೀತಾರಾಮ ಭಟ್ಟ, (೨೦೧೧). ಮುದ್ದುಮಲ್ಲಿ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು.

೩೨. ಬಸವರಾಜ ಆರ್.(೨೦೦೧). ಮಾತಾಡುವ ಮರದ ತುಂಡು, ನಿರ್ಮಲ ಪ್ರಕಾಶನ, ತಿಪಟೂರು.

೩೩. ಬೇದ್ರೆ ಮಂಜುನಾಥ್ (ಸಂ). (೨೦೧೩). ಸರ್ವರಿಗೂ ಸಮಪಾಲು, (ಮೂರನೇ ಮುದ್ರಣ). ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೩೪. ಬೇಲೂರು ರಾಮಮೂರ್ತಿ. (೨೦೧೨). ಒಂದಿಷ್ಟು ಕಥೆಗಳು, ಪ್ರಕಾಶ ಸಾಹಿತ್ಯ, ಬೆಂಗಳೂರು.

೩೫. ಬೊಳುವಾರು ಮಹಮ್ಮದ್ ಕುಞ್ಞಿ, (೨೦೧೨). ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ, (ಹನ್ನೆರಡನೇ ಮುದ್ರಣ) ಅಂಕಿತ ಪ್ರಕಾಶನ, ಬೆಂಗಳೂರು.

೩೬. ಮತ್ತೂರು ಸುಬ್ಬಣ್ಣ (೨೦೧೪). ವಿಚಿತ್ರ ಸಲಹೆ. ಅನು ಪ್ರಕಾಶನ, ಬೆಂಗಳೂರು.

೩೭. ರಘುನಾಥ ಚ. ಹ. (೨೦೧೫). ಪುಟ್ಟಲಕ್ಷ್ಮಿ ಕಥೆಗಳು. ಅಂಕಿತ ಪುಸ್ತಕ, ಬೆಂಗಳೂರು.

೩೮. ವಿಜಯಲಕ್ಷ್ಮಿ. ಕೆ.ಎಂ. (೨೦೧೪). ಮಕ್ಕಳಿಗಾಗಿ ಮೂವತ್ತು ಕಥೆಗಳು, ಸಪ್ನ ಬುಕ್ ಹೌಸ್, ಬೆಂಗಳೂರು.

೩೯. ವೈದೇಹಿ, (೨೦೧೪). ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು, ಜಡಭರತ ಪ್ರಕಾಶನ, ಧಾರವಾಡ.

೪೦. ಶಶಿಧರ ವಿಶ್ವಾಮಿತ್ರ. (೨೦೦೯). ನಾಲ್ಕು ಚಂದದ ಕತೆಗಳು, ತೇಜು ಪಬ್ಲಿಕೇಶನ್ಸ್, ಬೆಂಗಳೂರು.

೪೧. ಶಂಕರಾನಂದ.(೨೦೧೧). ವಿಚಿತ್ರ ಎಲೆಗಳು, ವಸಂತ ಪ್ರಕಾಶನ, ಬೆಂಗಳೂರು.

೪೨. ಶಂಕರಾನಂದ (೨೦೧೨). ಮಕ್ಕಳಿಗಾಗಿ ಗಣೇಶನ ಕಥೆಗಳು, ವಸಂತ ಪ್ರಕಾಶನ, ಬೆಂಗಳೂರು.

೪೩. ಶಾಂತಾರಾಮ ಸೋಮಯಾಜಿ (೨೦೧೧). ಚಿಟ್ಟೆಹಾಡು ಮತ್ತು ಇರುವೆ ಮದುವೆ(ಸಂ.) (ಎರಡನೇ ಮುದ್ರಣ).ನವಕರ್ನಾಟಕ ಪಬ್ಲಿಕೇಶನ್ಸ್ ಲಿಮಿಟೆಡ್, ಬೆಂಗಳೂರು.

೪೪. ಶಾಂತಾರಾಮ ಸೋಮಯಾಜಿ.(೨೦೧೨). ಡೊಂಕು ಬಾಲ ಮತ್ತು ಗಟ್ಟಿ ಮೆದುಳು, ವಸಂತ ಪ್ರಕಾಶನ, ಬೆಂಗಳೂರು.

೪೫. ಶಾನುಭೋಗ. ಆರ್. ಕೆ. (೨೦೧೪). ಸುನಾಮಿಯ ಸುಳಿಯಲ್ಲಿ. ಜಡಭರತ ಪ್ರಕಾಶನ, ಧಾರವಾಡ

೪೬. ಶಾಂತಾರಾಮ ಸೋಮಯಾಜಿ, (೨೦೧೧). ಹೊಮೊ ಸೆಪಿಯನ್ಸ್ ರ ಬುದ್ಧಿವಂತಿಕೆ, ವಸಂತ ಪ್ರಕಾಶನ, ಬೆಂಗಳೂರು.

೪೭. ಶಿವರಾಮ ರೈ ಪಿ.(೨೦೦೪). ಕನಸಿನ ಲೋಕ, ನಿರ್ಮಲ ಪ್ರಕಾಶನ, ತಿಪಟೂರು.

೪೮. ಶ್ರೀನಿವಾಸ ಉಡುಪ. ಎನ್. (೨೦೧೨). ಗೂಬಜ್ಜಿಯ ಗೊರಕೆ, ನವಕರ್ನಾಟಕ ಪಬ್ಲಿಕೇಶನ್ಸ್ ಲಿಮಿಟೆಡ್, ಬೆಂಗಳೂರು.

೪೯. ಸಹನಾ(ಸಂ). (೨೦೦೭). ಸಾಹಸ ಕಥೆಗಳು, ನವಕರ್ನಾಟಕ ಪಬ್ಲಿಕೇಶನ್ಸ್ ಲಿಮಿಟೆಡ್, ಬೆಂಗಳೂರು.

೫೦. ಸವಿತಾ ಪ್ರಭಾಕರ್, (೨೦೧೨). ಮಕ್ಕಳ ಕಥಾ ಪ್ರಪಂಚ, ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.

೫೧. ಸವಿತಾ ಪ್ರಭಾಕರ್, (೨೦೧೨). ಮಕ್ಕಳ ಮೋಜಿನ ಕಥೆಗಳು, ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.

೫೨. ಸವಿತಾ ಪ್ರಭಾಕರ್, (೨೦೧೩). ರಾಣಿ ಎತ್ತಿದ ಆನೆ, ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.

೫೩. ಸುಧಾಮೂರ್ತಿ, (೨೦೧೨), ಸುಕೇಶಿನಿ ಮತ್ತು ಇತರ ಕಥೆಗಳು, (ಎಂಟನೇ ಮುದ್ರಣ). ಸಪ್ನ ಬುಕ್ ಹೌಸ್, ಬೆಂಗಳೂರು.

೫೪. ಸುಮತೀಂದ್ರ ನಾಡಿಗ, (೨೦೦೦). ಗೂಬೆಯ ಕಥೆ, ಸಪ್ನ ಬುಕ್ ಹೌಸ್, ಬೆಂಗಳೂರು.

೫೫. ಹ.ಸ. ಬ್ಯಾಕೋಡ, (೨೦೧೧). ಒಂಟಿಯಾದ ಕಪಿ, ಶ್ರೀ ಅಮ್ಮ ಪ್ರಕಾಶನ, ಬೆಂಗಳೂರು.

೫೬. ಹ.ಸ. ಬ್ಯಕೋಡ, (೨೦೧೨). ಮಾವಿನ ತೋಟದಲಿ ಹಲಸಿನಸುವಾಸನೆ, ಶ್ರೀ ಅಮ್ಮ ಪ್ರಕಾಶನ, ಬೆಂಗಳೂರು.

೫೭. ಸಂಪಟೂರು ವಿಶ್ವನಾಥ್. (೨೦೧೪). ಇಬ್ಬರು ಪತ್ತೇದಾರರು, ಮಕ್ಕಳ ಸಾಹಸ ಪ್ರಧಾನ ಕಥೆ, ದರ್ಪಣ ಪ್ರಕಾಶನ, ಬೆಂಗಳೂರು.

ಮಕ್ಕಳ ಕವನ ಸಂಕಲನಗಳು ಹಾಗೂ ಮಹಾಕಾವ್ಯ

೧. ಆನಂದ ಪಾಟೀಲ (ಸಂ.) (೨೦೨೦). ಡಾ.ಎನ್.ಆರ್. ನಾಯಕರ ಮಕ್ಕಳ ಕಾವ್ಯ– ಆಪ್ತ ಮಾತುಕತೆ, ಜಾನಪದ ಪ್ರಕಾಶನ ಹೊನ್ನಾವರ, ಉತ್ತರ ಕನ್ನಡ.

೨. ಟಿ.ಎಸ್. ನಾಗರಾಜ ಶೆಟ್ಟಿ, (೧೯೯೬). ಮಕ್ಕಳ ಸಮಗ್ರ ಕವಿತೆಗಳು, ನಿರ್ಮಲ ಪ್ರಕಾಶನ, ತಿಪಟೂರು.

೩. ಪಳಕಳ ಸೀತಾರಾಮ ಭಟ್ಟ (೧೯೯೯). ಕತೆ ಹೇಳಜ್ಜೀ, ಮಕ್ಕಳ ಕವಿತೆಗಳು, ನಿರ್ಮಲ ಪ್ರಕಾಶನ, ತಿಪಟೂರು.

೪. ಮಧುರಕಾನನ ಗೋಪಾಲಕೃಷ್ಣ ಭಟ್, ವಿದ್ವಾನ್,(೨೦೧೨). ಮಕ್ಕಳ ರಾಮಾಯಣ ಚೌಪದಿ ಮಹಾಕಾವ್ಯ, ರಂಗಕಹಳೆ ಪ್ರಕಾಶನ, ಬೆಂಗಳೂರು.

೫. ಶ್ರೀನಿವಾಸ ಉಡುಪ ಎನ್, ಡಾ. ಆನಂದ ಪಾಟೀಲ, ಡಾ. ಬಸು ಬೇವಿನಗಿಡದ (ಸಂ.), (೨೦೧೯). ಮಕ್ಕಳ ಹೊಸ ಕಾವ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮಕ್ಕಳ ನಾಟಕಗಳು

೧. ಊರ್ಮಿಳಾ ರಾವ್(ಸಂ).(೨೦೦೮). ಪದ್ಮನಾಭ ಸೋಮಯಾಜಿ ವಿರಚಿತ ನಾಲ್ಕು ನಾಟಕಗಳು, ಪುಸ್ತಕನಿಧಿ, ಹರ್ಕಾಡಿ, ಕುಂದಾಪುರ.

೨. ಭಂಡಾರಿ ಆರ್.ವಿ., (೨೦೦೮). ಈದ್ಗಾ ಮತ್ತು ಬೆಳಕಿನ ಕಡೆಗೆ, ಕ್ರಿಯಾ ಪ್ರಕಾಶನ, ಬೆಂಗಳೂರು.

೩. ಭಂಡಾರಿ ಆರ್.ವಿ., (೨೦೦೫). ಒಂದೇ ಬಣ್ಣದ ಹಕ್ಕಿಗಳು, ಬಂಡಾಯ ಪ್ರಕಾಶನ, ಹೊನ್ನಾವರ.

೪. ಭಂಡಾರಿ ಆರ್. ವಿ., (೨೦೧೦). ಪ್ರೀತಿಯ ಕಾಳು, ಬಂಡಾಯ ಪ್ರಕಾಶನ, ಹೊನ್ನಾವರ.

೫. ಭಂಡಾರಿ ಆರ್.ವಿ. (೨೦೦೪). ಬೆಳಕು ಹಂಚಿದ ಬಾಲಕ, ನಾನೂ ಗಾಂಧಿ ಆಗ್ತೇನೆ, ಬಂಡಾಯ ಪ್ರಕಾಶನ, ಹೊನ್ನಾವರ.

೬. ಮಾಲತಿ ಎಸ್. (೨೦೧೪). ಮೂರು ಮಕ್ಕಳ ನಾಟಕಗಳು, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.

೭. ವಾಡೇದ ರಾ.ಶಿ., (೨೦೧೧). ಮಾಯದ ಕುದುರೆ, ಶಾರದಾ ಪ್ರಕಾಶನ, ಬಿಜಾಪುರ.

೮. ಭರತ್. ಸ. ಜಗನ್ನಾಥ್, (೨೦೧೩). ಮೊದಲ ಹೆಜ್ಜೆ, ಪ್ರಯಾ ಪ್ರಕಾಶನ, ಬೆಂಗಳೂರು.

೯. ಭಟ್ಟ ಗ.ಸು. (೧೯೯೯).ಚಿಟ್ಟೆಯ ಮೊಟ್ಟೆ, ನಿರ್ಮಲ ಪ್ರಕಾಶನ, ತಿಪಟೂರು.

೧೦. ಭಟ್ಟ ಗ. ಸು. (೨೦೦೧) ನಲಿಯಿತು ನವಿಲು, ನಿರ್ಮಲ ಪ್ರಕಾಶನ, ತಿಪಟೂರು.

೧೧. ಶಾನುಭೋಗ ಆರ್. ಕೆ. (೨೦೦೦) ಅಪೂರ್ವ, ನಿರ್ಮಲ ಪ್ರಕಾಶನ, ತಿಪಟೂರು.

೧೨. ನಾರಾಯಣ ಭಟ್. ಟಿ. ರಾಮಕುಂಜ (೨೦೧೧). ಯಾರಿಗೂ ಯಾರೂ ಇಲ್ಲ: ಅಭಿಮಾನಿ ಪ್ರಕಾಶನ, ರಾಮಕುಂಜ.

೧೩. ಮಾಧವ ರಾವ್ ಎಸ್. ಕೆ.(೨೦೦೪). ಶಾಲೆಗಾಗಿ ಮಕ್ಕಳ ನಾಟಕಗಳು. ಭಾಗ – ೧: ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು.

೧೪. ಜಯಂತಿ. ಎಸ್. ಸುವರ್ಣ, (೨೦೧೫). ನಿಸರ್ಗ ಮಾತೆ ಮಧುಶ್ರೀ ಪ್ರಕಾಶನ, ಅಂಬಲಪಾಡಿ, ಉಡುಪಿ.

೧೫. ಜಯಂತಿ. ಎಸ್. ಸುವರ್ಣ, (೨೦೧೫). ಬದುಕುವ ದಾರಿ, ಮಧುಶ್ರೀ ಪ್ರಕಾಶನ, ಅಂಬಲಪಾಡಿ, ಉಡುಪಿ.

೧೬. ಮಹದೇವಪ್ಪ ತಾಳಗುಂದ ಎಂ. (೨೦೧೪). ಉತ್ತರವಿಲ್ಲದ ಒಗಟು ಮತ್ತು ಇತರ ನಾಟಕಗಳು, ಸಿರಿಗನ್ನಡ ಪುಸ್ತಕ ಮನೆ, ಶಿವಮೊಗ್ಗ.

೧೭. ವಸುಂಧರಾ ಭೂಪತಿ ಡಾ. ಸುಮಂಗಲಾ. ಎಸ್. (೨೦೧೩). ವಿಜ್ಞಾನಮಯಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.

೧೮. ರಾಂ ಎಲ್ಲಂಗಳ.(೨೦೧೩). ಬಹುಮಾನ ಬಾಂಧವ್ಯ, ವಾಮಂಜೂರು, ಮಂಗಳೂರು.

೧೯. ರಾಮನಾಥ್ ಎಚ್.ಕೆ. (೨೦೧೨). ಎಚ್.ಕೆ.ಆರ್. ಮಕ್ಕಳ ಸಮಗ್ರ ನಾಟಕಗಳು, ಬುಕ್ ಪ್ಯಾರಡೈಸ್, ಮೈಸೂರು.

೨೦. ರಾಧಾ ಕುಲಕರ್ಣಿ. (೨೦೦೫). ಅಂತೂ ಕಣ್ಣು ತರೆದವು ಮತ್ತು ಇತರ ನಾಟಕಗಳು, ಜಡಭರತ ಪ್ರಕಾಶನ, ಧಾರವಾಡ.

ಮಕ್ಕಳ ಕಾದಂಬರಿಗಳು

೧. ಆನಂದ ಪಾಟೀಲ ವಿ., (೨೦೦೦). ಬೆಳದಿಂಗಳು, ಅಭಿನವ ಪ್ರಕಾಶನ, ಬೆಂಗಳೂರು.

೨. ಜಂಬುನಾಥ ಕಾಂಚ್ಯಾಣಿ.(೧೯೯೯). ಮಿಡಿದ ಕರುಳು, ನಿರ್ಮಲ ಪ್ರಕಾಶನ, ತಿಪಟೂರು.

೩. ನಟರಾಜ್ ಕೆ. ಚಂದ್ರಲೋಕಕೆ ಹೋಗೋಣು ಬಾ.(೧೯೯೯). (ಮಕ್ಕಳ ವೈಜ್ಞಾನಿಕ ಕಾದಂಬರಿ). ನಿರ್ಮಲ ಪ್ರಕಾಶನ, ತಿಪಟೂರು.

೪. ನಾ. ಡಿಸೋಜ ಡಾ. (೨೦೧೨). ಹಾರುವ ಹಕ್ಕಿಗೆ ಹಸಿರೆಲೆ ತೋರಣ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ

೫. ಬಸವರಾಜ್ ಆರ್.(೨೦೦೮). ಚಿನ್ನದ ನದಿಯ ದೊರೆ, ನಿರ್ಮಲ ಪ್ರಕಾಶನ, ತಿಪಟೂರು.

೬. ಬಸು ಬೇವಿನಗಿಡದ, (೨೦೦೭). ನಾಳೆಯ ಸೂರ್ಯ, ಚೈತ್ರ ಪ್ರಕಾಶನ, ಧಾರವಾಡ

೭. ಮಾದುಪ್ರಸಾದ್ ಹುಣಸೂರು, (೨೦೧೧). ಗೋಲಿ ಗೆಜ್ಜುಗದ ಹುಡುಗ, ಪ್ರೇಮ ಪ್ರಕಾಶನ, ದಾವಣಗೆರೆ

೮. ಶಾನಭೋಗ ಆರ್. ಕೆ.(೨೦೦೭). ಅಂಟಾರ್ಕಟಿಕಾ (ಮಕ್ಕಳ ವೈಜ್ಞಾನಿಕ ಕಾದಂಬರಿ) ನಿರ್ಮಲ ಪ್ರಕಾಶನ, ತಿಪಟೂರು.

೯. ಶಾಂತಾರಾಮ ಸೋಮಯಾಜಿ, (೨೦೧೦). ಸುರಭಿ ಮತ್ತು ಜಾರುಂದೀ, ಪ್ರೌಢ ಮಕ್ಕಳ ಕಾದಂಬರಿ ಭಾಗ–೧, ಐಬಿಎಚ್ ಪ್ರಕಾಶನ, ಬೆಂಗಳೂರು.

೧೦. ಶಾಂತಾರಾಮ ಸೋಮಯಾಜಿ, (೨೦೧೧). ಸುರಭಿ, ಜಾರುಂದೀ ಮತ್ತು ಪೆಲತ್ತರಿ, ಪ್ರೌಢ ಮಕ್ಕಳ ಕಾದಂಬರಿ ಭಾಗ–೨, ಐಬಿಎಚ್ ಪ್ರಕಾಶನ, ಬೆಂಗಳೂರು.

೧೧. ಹ.ಸ. ಬ್ಯಾಕೋಡ, (೨೦೧೨) ಕೋಟೆಯಾದವರು, ಶ್ರೀ ಅಮ್ಮ ಪ್ರಕಾಶನ, ಬೆಂಗಳೂರು.

೧೨. ಹ.ಸ. ಬ್ಯಾಕೋಡ, (೨೦೧೩). ಹಾರದಿರಲಿ ಪ್ರಾಣಪಕ್ಷಿ, ಶ್ರೀ ಅಮ್ಮ ಪ್ರಕಾಶನ, ಬೆಂಗಳೂರು.

೧೩. ಹ.ಸ. ಬ್ಯಾಕೋಡ, (೨೦೧೪) ಆಪರೇಶನ್ ಆನೆಮಲೆ, ಶ್ರೀ ಅಮ್ಮ ಪ್ರಕಾಶನ, ಬೆಂಗಳೂರು.

ಅಧ್ಯಯನಕ್ಕೆ ಬಳಸಿದ ಇತರ ಕೃತಿಗಳು

೧. ಆನಂದ ಪಾಟೀಲ, (ಸಂ.). (೨೦೦೬). ಮಕ್ಕಳ ಸಾಹಿತ್ಯ –೨೦೦೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨. ಈಶ್ವರಚಂದ್ರ ಚಿಂತಾಮಣಿ, (ಸಂ.). (೧೯೯೬). ಮಕ್ಕಳ ಸಾಹಿತ್ಯ –೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩. ಗೋಗೇರಿ. ಎಂ.ಡಿ. (ಸಂ.). (೨೦೦೧). ಮಕ್ಕಳ ಸಾಹಿತ್ಯ ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪. ಚಂದ್ರಕಲಾ ಬಿದರಿ (ಸಂ.). (೨೦೧೩). ಮಕ್ಕಳ ಸಾಹಿತ್ಯ –೨೦೦೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫. ಚಂದ್ರಕಾಂತ ಕರದಳ್ಳಿ (ಸಂ.). (೨೦೦೬). ಮಕ್ಕಳ ಸಾಹಿತ್ಯ ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ಧನಂಜಯ ಕುಂಬ್ಳೆ (ಸಂ.), (೨೦೧೮). ಬಾಲ ಕಥಾಲೋಕ, ಪಳಕಳ ಸೀತಾರಾಮ ಭಟ್ಟರ ಮಕ್ಕಳ ಕತೆಗಳ ಸಮಗ್ರ ಸಂಕಲನ, ಸಂಪುಟ ೧, ಪ್ರಸಾರಾಂಗ, ಮಂಗಳೂರು ವಿಶ್ವದ್ಯಾನಿಲಯ, ಮಂಗಳಗಂಗೋತ್ರಿ.

೭. ಧನಂಜಯ ಕುಂಬ್ಳೆ (ಸಂ.), (೨೦೧೮). ಬಾಲ ಕಥಾಲೋಕ, ಪಳಕಳ ಸೀತಾರಾಮ ಭಟ್ಟರ ಮಕ್ಕಳ ಕತೆಗಳ ಸಮಗ್ರ ಸಂಕಲನ, ಸಂಪುಟ ೨, ಪ್ರಸಾರಾಂಗ, ಮಂಗಳೂರು ವಿಶ್ವದ್ಯಾನಿಲಯ, ಮಂಗಳಗಂಗೋತ್ರಿ.

೮. ಭರತನಹಳ್ಳಿ ನಾ. ಸು, (ಸಂ.). (೨೦೧೬). ಮಕ್ಕಳ ಸಾಹಿತ್ಯ –೨೦೧೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯. ರಘುನಾಥ್ ಎನ್. ಎಸ್. (ಸಂ), (೨೦೦೧). ಶತಮಾನದ ಮಕ್ಕಳ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೧೦. ರಾಜೇಂದ್ರ ಗಡಾದ (ಸಂ.). (೨೦೦೧). ಮಕ್ಕಳ ಸಾಹಿತ್ಯ ೨೦೦೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೧. ವೆಂಕಟೇಶಮೂರ್ತಿ. ಎಚ್. ಎಸ್. (೨೦೧೩). ಸಮಗ್ರ ಮಕ್ಕಳ ಸಾಹಿತ್ಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು.

೧೨. ಶಿವಲಿಂಗಪ್ಪ ಹಂದಿಹಾಳು, (ಸಂ.). (೨೦೧೬). ಮಕ್ಕಳ ಸಾಹಿತ್ಯ ೨೦೧೨-೨೦೧೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಪರಾಮರ್ಶನ ಗ್ರಂಥಗಳು

೧. ಆನಂದ ವಿ. ಪಾಟೀಲ, (೨೦೧೦) ಅಲರು, ಅಭಿನವ ಪ್ರಕಾಶನ, ಬೆಂಗಳೂರು.

೨. ಕಾತ್ಯಾಯಿನಿ ಕುಂಜಿಬೆಟ್ಟು, (೨೦೧೪) ಪಳಕಳ ಸೀತಾರಾಮ ಭಟ್ಟರ ಸಮಗ್ರ ಸಾಹಿತ್ಯ, (ಅಪ್ರಕಟಿತ ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧ)

೩. ಕೃಷ್ಣಮೂರ್ತಿ. ಬಿ. (೧೯೯೯). ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಾಸಿ ರಂಗಭೂಮಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೪. ಕೃಷ್ಣಾನಂದ ಗರ್ಡಾಡಿ. (೨೦೦೭). ಪ. ರಾಮಕೃಷ್ಣ ಶಾಸ್ತ್ರಿಯವರ ಮಕ್ಕಳ ಸಾಹಿತ್ಯ, ಸ್ವಾಗತ ಸಮಿತಿ ೭೪ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನ-೨೦೦೭, ಉಡುಪಿ.

೫. ಕೃಷ್ಣಾನಂದ ಗರ್ಡಾಡಿ. (೨೦೦೯) ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ: ಒಂದು ಅಧ್ಯಯನ, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕಾಸರಗೋಡು. (ಕಣ್ಣೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ, ಅಪ್ರಕಟಿತ),

೬. ಗಿರಿಮನೆ ಶ್ಯಾಮರಾವ್, (೨೦೧೫) ನಾವು, ಮಕ್ಕಳು ಮತ್ತು ಶಿಕ್ಷಣ, ಗಿರಿಮನೆ ಪ್ರಕಾಶನ, ಸಕಲೇಶಪುರ.

೭. ಜಯಲಲಿತಾ.(೧೯೯೭). ಶಾಲಾ ಮಕ್ಕಳು ಹೇಳಿದ ಜನಪದ ಕಥೆಗಳು: ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೮. ಜೀನಹಳ್ಳಿ ಸಿದ್ದಲಿಂಗಪ್ಪ, (೨೦೧೯). ಮಕ್ಕಳ ಸಾಹಿತ್ಯ ಸೊಗಸು.ಶ್ರುತಿ ಪ್ರಕಾಶನ, ಮೈಸೂರು.

೯. ನಾಗರಾಜ ಶೆಟ್ಟಿ ಟಿ.ಎಸ್. (೨೦೦೫). ಮಕ್ಕಳ ಸಾಹಿತ್ಯ: ಕೆಲವು ಅಧ್ಯಯನಗಳು, ನಿರ್ಮಲ ಪ್ರಕಾಶನ, ತಿಪಟೂರು.

೧೦. ನಾಯಕ ಜಿ.ಎಚ್. (ಸಂ), (೨೦೦೯) ಶತಮಾನದ ಕನ್ನಡ ಸಾಹಿತ್ಯ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ.

೧೧. ನಾರಾಯಣ ಭಟ್, ಟಿ. ರಾಮಕುಂಜ, (೨೦೧೧) ನಮ್ಮ ಮಕ್ಕಳು ಹೇಗಿರಬೇಕು?, ಮೌಲಿಕಾ ಪ್ರಕಾಶನ, ರಾಮಕುಂಜ.

೧೨. ನಾರಾಯಣ ಭಟ್, ಟಿ. ರಾಮಕುಂಜ, (೨೦೧೨) ಮೌಲ್ಯ ಬಿಂದು, ಮೌಲಿಕಾ ಪ್ರಕಾಶನ, ರಾಮಕುಂಜ.

೧೩. ನಾರಾಯಣ ಭಟ್, ಟಿ. ರಾಮಕುಂಜ, (೨೦೧೪) ಮಕ್ಕಳು ಎಲ್ಲಿ, ಹೇಗಿರ್ಬೇಕು? ಮೌಲಿಕಾ ಪ್ರಕಾಶನ, ರಾಮಕುಂಜ.

೧೪. ನಾವಡ ಎ. ವಿ., (೨೦೧೫) ಜಾನಪದ ಶೋಧ, ಅಸ್ಮಿತೆ ಪ್ರಕಾಶನ, ಮಂಗಳೂರು.

೧೫. ನಾವಡ ಎ. ವಿ., (೨೦೧೫). ಸಾಹಿತ್ಯ ಶೋಧ, ಶೋಧನ ಪ್ರಕಾಶನ, ಮಂಗಳೂರು.

೧೬. ನಿರುಪಮಾ, (೨೦೦೪). ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,

೧೭. ನಿಂಗು ಸೊಲಗಿ, (೨೦೧೩). ಮಕ್ಕಳ ರಂಗಭೂಮಿ: ಪ್ರದರ್ಶನ– ಪ್ರಕ್ರಿಯೆ, ಚಿಲಿಪಿಲಿ ಪ್ರಕಾಶನ, ಧಾರವಾಡ.

೧೮. ಬಸು ಬೇವಿನಗಿಡದ (ಸಂ.), (೨೦೧೫). ಮಕ್ಕಳ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯. ಭಂಡಾರಿ ಆರ್.ವಿ. (೨೦೧೧). ಮಕ್ಕಳು ಮತ್ತು ಜಗತ್ತು, ಬಂಡಾಯ ಪ್ರಕಾಶನ, ಕೆರೆಕೋಣ, ಹೊನ್ನಾವರ.

೨೦. ಭಾರತೀದೇವಿ. (೧೯೯೪). ದಕ್ಷಿಣ ಕನ್ನಡದ ಶಿಶುಗೀತೆಗಳು, ಮಂಗಳೂರು ವಿಶ್ವವಿದ್ಯಾನಿಲಯ, (ಎಂ.ಫಿಲ್, ಅಪ್ರಕಟಿತ ಸಂಪ್ರಬಂಧ)

೨೧. ಮರುಳಸಿದ್ದಪ್ಪ. ಕೆ. (೧೯೮೩), ಆಧುನಿಕ ಕನ್ನಡ ನಾಟಕ, ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು.

೨೨. ಮಾದುಪ್ರಸಾದ್ ಹುಣಸೂರು, (೨೦೨೦). ಮಕ್ಕಳ ಕಥಾ ಸಾಹಿತ್ಯ: ಸ್ವರೂಪ ಮತ್ತು ತಾತ್ವಿಕತೆ, ಪ್ರೇಮ ಪ್ರಕಾಶನ, ಮೈಸೂರು.

೨೩. ರಾಘವೇಂದ್ರ ಹೇರ್ಳೆ. ಜಿ, (೨೦೧೨) ಮೌಲ್ಯ ಶಿಕ್ಷಣ, ಶ್ರುತಿಲೋಕ ಪ್ರಕಾಶನ, ಮೈಸೂರು.

೨೪. ವಾಮದೇವಪ್ಪ ಹೆಚ್. ವಿ, (೨೦೧೩), ಕಲಿಕಾ ಪ್ರಕ್ರಿಯೆಯ ಮನೋವಿಜ್ಞಾನ ಮತ್ತು ಮೌಲ್ಯಮಾಪನ, ಶ್ರೇಯಸ್ ಪಬ್ಲಿಕೇಶನ್ಸ್, ದಾವಣಗೆರೆ.

೨೫. ಸದಾಶಿವ ಭಟ್ ಬಿ. ಪಂಜೆಯವರ ಸಾಹಿತ್ಯ ಕೃತಿಗಳು: ಒಂದು ಅಧ್ಯಯನ, (೧೯೮೫). ಮಂಗಳೂರು ವಿಶ್ವವಿದ್ಯಾನಿಲಯ, (ಪಿಎಚ್.ಡಿ ಮಹಾಪ್ರಬಂಧ, ಅಪ್ರಕಟಿತ)

೨೬. ಸಬಿಹಾ ಭೂಮೀಗೌಡ (ಸಂ), (೨೦೦೯) ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ, ಡಾ. ಕೆ. ಶಿವರಾಮ ಕಾರಂತ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ,

೨೭. Subrahmanyan, T.S.R, Chairman, National Policy on Education.(2016). Report of the committee for Evolution, Ministry of Human resource Development.

ಅಂತರ್ಜಾಲ:

೧. ಜನಾರ್ದನ ಭಟ್ಟ, ಪಂಜೆ (ಜೂನ್ ೪, ೨೦೨೧, ಕರಾವಳಿಯ ಕವಿರಾಜಮಾರ್ಗ, ಫೇಸ್‌ಬುಕ್ ಬರಹ

೨. ಆನಂದ ಪಾಟೀಲ, ಮಕ್ಕಳ ಸಾಹಿತ್ಯ ಓದು; ಒಲವು, ವಿವಿಧ ಸಂಚಿಕೆಗಳು

ಮಂಡಿಸಿದ ಪ್ರಬಂಧಗಳು:

- ಸಮಕಾಲೀನ ಕನ್ನಡ ಸಾಹಿತ್ಯದ ಬಗೆಗೆ ಕಾಸರಗೋಡಿನಲ್ಲಿರುವ ಕಣ್ಣೂರು ವಿಶ್ವವಿದ್ಯಾನಿಲಯದ ಭಾರತೀಯ ಭಾಷಾ ಅಧ್ಯಯನಾಂಗದ ಕನ್ನಡ ವಿಭಾಗದಲ್ಲಿ ೨೧-೦೩-೨೦೧೯ ರಿಂದ ೨೩-೦೩-೨೦೧೯ರ ವರೆಗೆ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ***'ಆಧುನಿಕ ಮಕ್ಕಳ ನಾಟಕ: ಮೌಲ್ಯಗಳ ವಿವೇಚನೆ'*** ಎಂಬ ವಿಷಯದಲ್ಲಿ ಪ್ರಬಂಧವನ್ನು ಮಂಡಿಸಲಾಯಿತು.
- ಮಂಗಳೂರಿನ ಶ್ರೀನಿವಾಸ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ ೧೪-೧೨-೨೦೧೯ ರಂದು ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ***'ಶಿಕ್ಷಣದ ಮೂಲಕ ಮೌಲ್ಯ ಪ್ರಚೋದನೆಯಲ್ಲಿ ಮಕ್ಕಳ ಸಾಹಿತ್ಯದ ಪಾತ್ರ'*** ಎಂಬ ವಿಷಯದಲ್ಲಿ ಸಂಶೋಧನಾ ಪ್ರಬಂಧವನ್ನು ಮಂಡಿಸಲಾಯಿತು.
- ದಿನಾಂಕ ೨೧.೦೨.೨೦೨೦ ರಿಂದ ೨೩.೦೨.೨೦೨೦ ರವರೆಗೆ ದ್ರಾವಿಡ ವಿಶ್ವವಿದ್ಯಾನಿಲಯ, ಕುಪ್ಪಂನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ***'ದಕ್ಷಿಣ ಕನ್ನಡದ ಮಕ್ಕಳ ಸಾಹಿತ್ಯ: ಇತ್ತೀಚಿಗಿನ ಬೆಳವಣಿಗೆಗಳು ಹಾಗೂ ವೈಶಿಷ್ಟ್ಯಗಳು'*** ಎಂಬ ಪ್ರಬಂಧವನ್ನು ಮಂಡಿಸಲಾಯಿತು.

ಪ್ರಕಟಿತ ಲೇಖನಗಳು:

- ದ್ರಾವಿಡ ವಿಶ್ವವಿದ್ಯಾನಿಲಯದ ವತಿಯಿಂದ ಕುಪ್ಪಂನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದ ಸಂದರ್ಭದಲ್ಲಿ ಬಿಡುಗಡೆಗೊಂಡ **Dravidian Languages** vis a vis **Indian Culture** A literary Exploration (2020). Published by: Centenary committee publications, (ISBN: 978-81-943850-4-2) ಕೃತಿಯಲ್ಲಿ ***'ದಕ್ಷಿಣ ಕನ್ನಡದ ಮಕ್ಕಳ ಸಾಹಿತ್ಯ: ಇತ್ತೀಚಿಗಿನ ಬೆಳವಣಿಗೆಗಳು ಹಾಗೂ ವೈಶಿಷ್ಟ್ಯಗಳು'*** ಪ್ರಬಂಧವು ಪ್ರಕಟವಾಗಿದೆ.
- ಯುಜಿಸಿ ಕೇರ್ ಪಟ್ಟಿಯಲ್ಲಿರುವ ತಜ್ಞ ಪರಿಶೀಲಿತ 'ಅರುಹು ಕುರುಹು' ತ್ರೈಮಾಸಿಕ ಪತ್ರಿಕೆಯ ಸಂಪುಟ ೧೨, ಸಂಚಿಕೆ ೪೫ ಜುಲೈ-ಸಪ್ಟೆಂಬರ್ ೨೦೨೧ರ ವಿಶೇಷ ಸಂಚಿಕೆಯಲ್ಲಿ (ISSN 2347-5048) ***'ಆಧುನಿಕ ಕಾಲಘಟ್ಟದ ಕನ್ನಡ ಮಕ್ಕಳ ನಾಟಕ-ಮೌಲ್ಯಗಳ ವಿವೇಚನೆ*** ಸಂಶೋಧನಾ ಲೇಖನ ಪ್ರಕಟವಾಗಿದೆ.
- ಯುಜಿಸಿ ಕೇರ್ ಪಟ್ಟಿಯಲ್ಲಿರುವ ತಜ್ಞ ಪರಿಶೀಲಿತ 'ಅರುಹು ಕುರುಹು' ತ್ರೈಮಾಸಿಕ ಪತ್ರಿಕೆಯ ಸಂಪುಟ ೧೨, ಸಂಚಿಕೆ ೪೬ ಅಕ್ಟೋಬರ್-ಡಿಸೆಂಬರ್ ೨೦೨೧ರ ವಿಶೇಷ ಸಂಚಿಕೆ ಸಂಶೋಧನಾ ಮಾರ್ಗ ಸಂಚಿಕೆಯ ಪುಟ ಸಂಖ್ಯೆ ೨೫೨-೨೫೬ ರಲ್ಲಿ (ISSN 2347-5048) ***'ಶಿಕ್ಷಣದ ಮೂಲಕ ಮೌಲ್ಯ ಪ್ರಚೋದನೆಯಲ್ಲಿ ಮಕ್ಕಳ ಸಾಹಿತ್ಯದ ಪಾತ್ರ*** ಸಂಶೋಧನಾ ಲೇಖನ ಪ್ರಕಟವಾಗಿದೆ.

ಮಾರ್ಗದರ್ಶಕರ ಸಹಿ **ಸಂಶೋಧನಾರ್ಥಿಯ ಸಹಿ**